# ಸಂವಿಧಾನ

ವೇಸ್ಟ್ ಪಿಕರ್ಸ್ ಇಂಟರ್ನ್ಯಾಷನಲ್ ಅಲೈಯನ್ಸ್

ಸಂವಿಧಾನದ ಈ ಪರಿಷ್ಕೃತ ಆವೃತ್ತಿಯು ಇಂಟರ್ನ್ಯಾಷನಲ್ ಅಲೈಯನ್ಸ್ ಆಫ್ ವೇಸ್ಟ್ ಪಿಕರ್ಸ್‌ನ ಜಾಗತಿಕ ಸಲಹಾ ಸಮಿತಿಯು 2022 ರ ಅಕ್ಟೋಬರ್ 17 ರಂದು ನಡೆಸಲಾದ ಸಂವಿಧಾನ ಸ್ವೀಕಾರ ಸೆಷನಿನಲ್ಲಿ ಅನುಮೋದಿಸಲಾದ ಬದಲಾವಣೆಗಳನ್ನು ಒಳಗೊಂಡಿದೆ. ಇದರ ಇಂಗ್ಲೀಷ್ ಆವೃತ್ತಿಯು ಆನ್‌ಲೈನ್‌ನಲ್ಲಿ ಈ ಲಿಂಕ್‌ನಲ್ಲಿ ಲಭ್ಯವಿದೆ https://globalrec.org/constitution


ಪೀಠಿಕೆ 2

0. ಹೆಸರು 4

1. ಲಕ್ಷ್ಯ 4

2. ಗುರಿಗಳು ಮತ್ತು ಉದ್ದೇಶಗಳು 4

3. ವ್ಯಾಪ್ತಿ 6

4. ಸದಸ್ಯತ್ವ 7

5. ಸದಸ್ಯತ್ವವನ್ನು ಕೊನೆಗಾಣಿಸುವುದು 7

6. ಸದಸ್ಯತ್ವದ ಶುಲ್ಕಗಳು 8

7. ಕೇಂದ್ರೀಯ ಸಂಘಟಿತ ವ್ಯವಸ್ಥೆ 8

7.1 ಕಾಂಗ್ರೆಸ್ 8

7.2 ಕಾರ್ಯಕಾರಿ ಸಮಿತಿ 9

7.3 ಪದಾಧಿಕಾರಿಗಳು 11

7.4 ಕಾರ್ಯಕಾರಿ ಸಮಿತಿ ಮತ್ತು ಪದಾಧಿಕಾರಿಗಳನ್ನು ಚುನಾಯಿಸುವುದು 12

7.5 ಪದಾಧಿಕಾರಿಗಳ ಸ್ಥಾನದ ವಜಾ 13

7.6. ತಾತ್ಕಾಲಿಕ ಪದಾಧಿಕಾರಿಗಳು 13

7.7 ಸಿಬ್ಬಂದಿ 13

8. ಹಣಕಾಸು ನಿರ್ವಹಣೆ 14

9. ಅಂಗಸಂಸ್ಥೆಗಳ ಕರ್ತವ್ಯಗಳು 15

9.1 ಅಲೈಯನ್ಸ್ ಮತ್ತು ಅಂಗಸಂಸ್ಥೆಗಳ ನಡುವಿನ ಸಂಬಂಧ: 15

9.2 ಅಂಗಸಂಸ್ಥೆಗಳ ಕರ್ತವ್ಯಗಳು 15

10. ಸಂವಿಧಾನದ ವ್ಯಾಖ್ಯಾನ 16

11. ತಿದ್ದುಪಡಿಗಳು 16

12. ಅಧಿಕಾರಿಗಳು/ನಾಯಕರ ನಷ್ಟ ಪರಿಹಾರ 16

13. ವಿಸರ್ಜನೆ 16

14. ಅನುಬಂಧಿತ ನಿಬಂಧನೆಗಳು 17

ವೇಸ್ಟ್ ಪಿಕರ್ಸ್
ಇಂಟರ್ನ್ಯಾಷನಲ್
ಅಲೈಯನ್ಸ್

# ಪೀಠಿಕೆ

ನಾವು ವೇಸ್ಟ್ ಪಿಕರುಗಳು, ಮರುಬಳಕೆದಾರರು, ಕ್ಯಾನರ್‌ಗಳು, ಕಸಗಾಡಿ ಡ್ರೈವರುಗಳು, ಗುಜುರಿಯವರು ಮತ್ತು ರಿಕ್ಲೈಮರ್ಸ್ ನಮ್ಮ ವಿಶಾಲ ಭೂಖಂಡಗಳ ವಿವಿಧೆಡೆ ಸಂಘಟಿತರಾಗಿದ್ದು ಕೆಳಗಿನ ಸಂವಿಧಾನದ ಆಧಾರದ ಮೇರೆಗೆ ನಮ್ಮ ಸಂವಾದ ಮತ್ತು ಸಾಮೂಹಿಕ ಬಲವರ್ಧನೆಯ ಪ್ರಕ್ರಿಯೆಗೆ ಕೈಜೋಡಿಸುತ್ತೇವೆ.

ಸಂಗ್ರಹಿಸುವ, ಕೇಂದ್ರೀಕರಿಸುವ, ಪ್ರತ್ಯೇಕಿಸುವ, ನಾಶಪಡಿಸುವ ಮತ್ತು ತ್ಯಜಿಸುವ ವ್ಯವಸ್ಥೆಯ ಫಲವಾದ ನಾವು, ಎಲ್ಲಾ ರೀತಿಯ ಜೀವಿಗಳಿಗೆ ಅಪಾಯ ಉಂಟುಮಾಡುವ ರೀತಿಯಲ್ಲಿ ನಮ್ಮ ಪರಿಸರದ ಮೇಲೆ ಅತಿಯಾದ ಆಕ್ರಮಣಶೀಲತೆ ತೋರಿಸುವ ಈ ಜಗತ್ತಿನಲ್ಲಿ ಬದುಕುಳಿಯಲಿಕ್ಕಾಗಿ ವರ್ಷಗಳಿಂದ ನಮ್ಮದೇ ಆದ ಕೆಲಸದ ವಿವಿಧ ರೂಪಗಳನ್ನು ರಚಿಸಿದ್ದೇವೆ. ನಾವು ಒಗ್ಗೂಡುವ ಮೂಲಕ, ಸಂವಾದದಲ್ಲಿ ಭಾಗವಹಿಸುವ ಮೂಲಕ ಮತ್ತು ಸಂಘಟಿಸುವ ಮೂಲಕ, ನಿರಾಕರಿಸಲ್ಪಟ್ಟ ನಮ್ಮ ಹಕ್ಕುಗಳನ್ನು ಹಿಂಪಡೆಯಲು ಅಂದರೆ ನಮ್ಮ ಕೆಲಸದ ಘನತೆ ಮತ್ತು ಪರಿಸರಕ್ಕಾಗಿ ನಾವು ನೀಡಿರುವ ಕೊಡುಗೆಗಳಿಗೆ ಸಿಗಬೇಕಾದ ನ್ಯಾಯಯುತ ಸಂಭಾವನೆ ಮತ್ತು ಮಾನ್ಯತೆ ಪಡೆಯಲು ಹೋರಾಟ ಮಾಡಿದ್ದೇವೆ.

ನಾವು ರಚಿಸಿರುವ ಸಂವಿಧಾನವು ನಮ್ಮ ಸಭೆಗಳ ಪ್ರಕ್ರಿಯೆಗಳು ಮತ್ತು ಠರಾವು ನಿರ್ಣಯಗಳಿಂದ ನಿರ್ದೇಶಿಸಲ್ಪಟ್ಟಿದೆ. ಸಾಂಪ್ರದಾಯಿಕವಾಗಿ ವ್ಯವಸ್ಥಿತವಾಗಿ ಹೊರಗಿಡಲ್ಪಟ್ಟ ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಲು ನಮ್ಮ ವಿಲೀನ ಹೋರಾಟದಲ್ಲಿ ನಾವು ಬಳಸುವ ತತ್ವಗಳನ್ನು ಇವು ಸ್ಥಾಪಿಸಿವೆ: ದಬ್ಬಾಳಿಕೆಯ ವಿರುದ್ಧದ ಮತ್ತು ವಿಮೋಚನೆಯ ಪರದ ಹೋರಾಟದ ಸಾಧನವಾಗಿ ನಿಜವಾದ ಪ್ರಜಾಪ್ರಭುತ್ವ; ಸಕ್ರಿಯ ಮತ್ತು ನಾಯಕತ್ವವುಳ್ಳ ಯೂನಿಯನ್ ಸಂಘಟನೆ; ನಾವು ಪ್ರತಿನಿಧಿಸುವ ಎಲ್ಲಾ ಕಾರ್ಮಿಕರು ಕಾನೂನುಬದ್ಧಗೊಳಿಸಿದ ಸಾಮೂಹಿಕ ಸಾಂಸ್ಥಿಕ ವಿಧಾನಗಳು; ಸಮಾನತೆ ಮತ್ತು ನ್ಯಾಯದೆಡೆಗೆ ಮುಂದೊತ್ತುವ ಎಂಜಿನ್‌ಗಳಾಗಿ ಪ್ರಾಮಾಣಿಕತೆ ಮತ್ತು ಪಾರದರ್ಶಕತೆ; ನಮ್ಮ ಉದ್ದೇಶಗಳ ನವೀಕರಣ ಮತ್ತು ಸುಧಾರಣೆಗಾಗಿ ಸಮತೋಲನ ಮತ್ತು ಸ್ವಯಂ ವಿಮರ್ಶೆಯ ಪ್ರಕ್ರಿಯೆಗಳು; ನಮ್ಮೆಲ್ಲರ ಮನೆಯಾಗಿ ಭೂಮಿಯ ಶಾಶ್ವತ ಆರೈಕೆ; ಕಡಿಮೆ ಇರುವವರಿಗೆ ಸೇವೆಯ ಒಂದು ರೂಪವಾಗಿ ಅಧಿಕಾರ ಚಲಾವಣೆ; ಮತ್ತು ಐಷಾರಾಮಿ ಬದುಕು, ಪೋಲು ಮಾಡುವಿಕೆ ಮತ್ತು ಅಮಾನವೀಯ ರೀತಿಯ ಲಾಭ ಗಳಿಕೆಯ ವಿರುದ್ಧ ಸರಳತೆ ಮತ್ತು ಸಮಾನತೆಯ ಪ್ರತಿಪಾದನೆ.

ಕೆಳಗಿನ ಸಂವಿಧಾನದಲ್ಲಿ, ನಮ್ಮ ಅಂತರರಾಷ್ಟ್ರೀಯ ಮೈತ್ರಿಯ ಉದ್ದೇಶ ಮತ್ತು ಗುರಿಗಳು, ನಮ್ಮ ವ್ಯಾಪಾರದ ವ್ಯಾಪ್ತಿ ಮತ್ತು ವ್ಯತ್ಯಾಸಗಳು, ನಮ್ಮ ವಕಾಲತ್ತು ಸಾಧನಗಳ ವ್ಯಾಪ್ತಿ, ನಮ್ಮ ಸಾಂಸ್ಥಿಕ ತತ್ವಗಳು ಮತ್ತು ಸಂಯೋಜನೆ ಅವಶ್ಯಕತೆಗಳು, ನಮ್ಮ ಕೇಂದ್ರ ಸಮನ್ವಯ ರಚನೆ, ನಮ್ಮ ಪದಾಧಿಕಾರಿಗಳ ಕರ್ತವ್ಯಗಳು ಮತ್ತು ನಮ್ಮ ಅಂಗಸಂಸ್ಥೆಗಳ ಹಕ್ಕು ಮತ್ತು ಕರ್ತವ್ಯಗಳನ್ನು ನಾವು ದೃಢಪಡಿಸುತ್ತೇವೆ, ಆದೇಶಿಸುತ್ತೇವೆ ಮತ್ತು ಸ್ಥಾಪಿಸುತ್ತೇವೆ.

ಸಹಿಷ್ಣುತೆ, ಸಾಮೂಹಿಕ ಪ್ರಯತ್ನ ಮತ್ತು ಶಾಂತಿಯ ಸಂಸ್ಕೃತಿಯನ್ನು ಬೆಳೆಸುವ ಗಂಭೀರ ಸಂಕಲ್ಪದೊಂದಿಗೆ, ನಮ್ಮ ಕೆಲಸವನ್ನು ಗೌರವಿಸಲು, ನಮ್ಮ ಕಾರ್ಮಿಕರಿಗೆ ಗೌರವಯುತ ಬದುಕು ಮತ್ತು ಉತ್ತಮ ಜೀವನವನ್ನು ಪಡೆಯಲು ಮತ್ತು ನಮ್ಮೆಲ್ಲರ ನೆಲೆಯಾದ ಭೂಮಿಯೆಡೆ ಕಾಳಜಿವಹಿಸಿ ಗುಣಪಡಿಸಲು ನಾವು ಬದ್ಧರಾಗಿದ್ದೇವೆ ಮತ್ತು ಈ ಇಂಟರ್ನ್ಯಾಷನಲ್ ವೇಸ್ಟ್ ಪಿಕರ್ಸ್ ಅಲೈಯನ್ಸ್‌ನಲ್ಲಿ ನಾವು ನಮ್ಮ ಸಂಸ್ಥೆಯನ್ನು ಸೇರಿಸುತ್ತೇವೆ.

# 0. ಹೆಸರು

ದ "ವೇಸ್ಟ್ ಪಿಕರ್ಸ್ ಇಂಟರ್ನ್ಯಾಷನಲ್ ಅಲೈಯನ್ಸ್".

# 1. ಲಕ್ಷ್ಯ

ವೇಸ್ಟ್ ಪಿಕರ್‌ಗಳ ಪ್ರಾತಿನಿಧಿಕ ರಚನೆ ಮತ್ತು ಮುಖವಾಣಿಯಾಗಿ ರಚನೆಗೊಂಡಿರುವ ಈ ಅಲೈಯನ್ಸ್ ಪ್ರಪಂಚದ ಮರುಬಳಕೆ ಮಾಡುವವರ ಕೆಲಸ ಮತ್ತು ಜೀವನ ಪರಿಸ್ಥಿತಿಗಳನ್ನು ಸುಧಾರಿಸುವ ಸಾರ್ವಜನಿಕ ನೀತಿಗಳನ್ನು ಕಂಡುಕೊಂಡು ಅವರ ಕೆಲಸ ಮತ್ತು ಅದರ ಮಾನ್ಯತೆಯನ್ನು ರಕ್ಷಿಸುತ್ತದೆ.

# 2. ಗುರಿಗಳು ಮತ್ತು ಉದ್ದೇಶಗಳು

ಅಲೈಯನ್ಸ್‌ನ ಗುರಿಗಳು ಮತ್ತು ಉದ್ದೇಶಗಳು ಕೆಳಗಿನಂತಿರುತ್ತವೆ:

2.1 ವೇಸ್ಟ್ ಪಿಕರ್‌ಗಳ ಘನತೆಯನ್ನು ಹೆಚ್ಚಿಸಲು ಮತ್ತು ಅಂತರರಾಷ್ಟ್ರೀಯ, ಪ್ರಾದೇಶಿಕ, ರಾಷ್ಟ್ರೀಯ ಹಾಗೂ ಸ್ಥಳೀಯ ಮಟ್ಟದಲ್ಲಿ ವೇಸ್ಟ್ ಪಿಕ್ಕರ್‌ಗಳ ಸಂಪೂರ್ಣ ಹಕ್ಕುಗಳನ್ನು ಸಾಧಿಸಲು ಜಾಗತಿಕವಾಗಿ ಅವರ ನೆಟ್‌ವರ್ಕ್‌ಗಳನ್ನು ವಿಸ್ತರಿಸಿ ಬಲಪಡಿಸುವುದು;

2.2 ರಾಷ್ಟ್ರೀಯ ಮತ್ತು ಪ್ರಾದೇಶಿಕ ಮಟ್ಟದಲ್ಲಿ ವೇಸ್ಟ್ ಪಿಕರ್‌ಗಳ ಹಿತಾಸಕ್ತಿಗಳನ್ನು ಪ್ರತಿನಿಧಿಸುವಲ್ಲಿ ಅಂಗಸಂಸ್ಥೆಗಳಿಗೆ ಸಹಾಯಮಾಡುವುದು;

2.3 ತ್ಯಾಜ್ಯದ ಸಮಗ್ರ ನಿರ್ವಹಣೆಯ ಸಹ-ಭಾಗಿತ್ವವನ್ನು ಉತ್ತೇಜಿಸುವ ಮೂಲಕ ಸರ್ಕಾರದ ಎಲ್ಲಾ ಹಂತಗಳು ವೇಸ್ಟ್ ಪಿಕರ್‌ಗಳ ಬೇಡಿಕೆಗಳನ್ನು ಆಲಿಸಿ, ಸ್ವೀಕರಿಸಿ, ಸ್ಪಂದಿಸುವಂಥ ಕಾರ್ಯತಂತ್ರಗಳ ಮೇಲೆ ಕೆಲಸ ಮಾಡುವ ಮೂಲಕ ಸಂಸ್ಥೆಯ ಎಲ್ಲಾ ಹಂತಗಳಲ್ಲಿ ವೇಸ್ಟ್ ಪಿಕರ್‌ಗಳ ಸಾಮರ್ಥ್ಯ ಮತ್ತು ನಾಯಕತ್ವವನ್ನು ಅಭಿವೃದ್ಧಿಪಡಿಸಿ ಬಲಪಡಿಸುವುದು;

2.4 ತಮ್ಮ ಹಕ್ಕುಗಳು ಮತ್ತು ಪ್ರಯೋಜನಗಳನ್ನು ಸಾಮೂಹಿಕವಾಗಿ ರಕ್ಷಿಸಲು ಅನುವು ಮಾಡಿಕೊಡುವ ಸದಸ್ಯತ್ವ ಆಧಾರಿತ ಸಂಸ್ಥೆಗಳನ್ನು ರಚಿಸಲು ಸ್ವಯಂ ಸಂಘಟನೆ ಮತ್ತು ಸ್ವಯಂ ನಿರ್ಣಯದಲ್ಲಿ ವಿಶ್ವದಾದ್ಯಂತವಿರುವ ವೇಸ್ಟ್ ಪಿಕರ್‌ಗಳನ್ನು ಉತ್ತೇಜಿಸಿ ಬೆಂಬಲಿಸುವುದು;

2.5 ವಿಶ್ವದ ವಿವಿಧ ಕಡೆಯಲ್ಲಿರುವ ವೇಸ್ಟ್ ಪಿಕರ್‌ಗಳು ಮತ್ತು ಇತರ ಅನೌಪಚಾರಿಕ ತ್ಯಾಜ್ಯ ಕಾರ್ಮಿಕರ ವರ್ಗದ ಅಸಮಾನತೆಗಳನ್ನು ಗುರುತಿಸಿ ಬಡ ಮತ್ತು ಬಹಳವಾಗಿ ಕಡೆಗಣಿಸಲಾಗಿರುವ ವೇಸ್ಟ್ ಪಿಕರ್‌ಗಳ ಜೀವನ ಮತ್ತು ಕೆಲಸದ ಪರಿಸ್ಥಿತಿಗಳ ಸುಧಾರಣೆಗೆ ಆದ್ಯತೆ ನೀಡುವುದು;

2.6 ಸದಸ್ಯ ಸಂಸ್ಥೆಗಳಲ್ಲಿ ಪ್ರಜಾಪ್ರಭುತ್ವ ಪ್ರಕ್ರಿಯೆಗಳನ್ನು ಬೆಂಬಲಿಸುವುದು, ಮಾರ್ಗದರ್ಶನ ನೀಡುವುದು, ಜೊತೆಗೂಡುವುದು;

2.7 ವೇಸ್ಟ್ ಪಿಕರ್‌ಗಳ ಪರಿಸರ ಉಳಿಸುವ ಕೊಡುಗೆಯನ್ನು ಸರಿದೂಗಿಸುವ ನ್ಯಾಯಯುತ ವೇತನದೊಂದಿಗೆ ಅವರ ಕೆಲಸವನ್ನು ಗುರುತಿಸುವಂತೆ ಮಾಡಲು ಪ್ರತಿನಿಧಿಸುವುದು. ಇದನ್ನು ವಸ್ತುವಿಗೆ ನಿಗದಿ ಬೆಲೆ, ವ್ಯಾಲ್ಯೂ ಚೈನಿನಲ್ಲಿ ಮೇಲೆರುವ ಹಕ್ಕು ಮತ್ತು ಪ್ರಪಂಚದಾದ್ಯಂತ ಲಕ್ಷಗಟ್ಟಲೇ ವೇಸ್ಟ್ ಪಿಕರ್‌ಗಳಲ್ಲಿ ಪ್ರತಿಯೊಬ್ಬರಿಗೆ ಕನಿಷ್ಠ ಷರತ್ತಿನಡಿಯಲ್ಲಿ ಕನಿಷ್ಠ ವೇತನ ಒದಗಿಸುವ ಮೂಲಕ ಮಾಡಲಾಗುತ್ತದೆ;

2.8 ವೇಸ್ಟ್ ಪಿಕರ್‌ಗಳನ್ನು ತ್ಯಾಜ್ಯ ನಿರ್ವಹಣೆಯ ಮುಖ್ಯವಾಹಿನಿಗೆ ತಂದು ಅವರ ಜೀವನೋಪಾಯದ ಮೇಲೆ ಪರಿಣಾಮ ಬೀರುವ ಅಂದರೆ ಘನತ್ಯಾಜ್ಯ ನಿರ್ವಹಣೆ, ಶೂನ್ಯ ತ್ಯಾಜ್ಯ, ವಿಸ್ತೃತ ಉತ್ಪಾದಕ ಜವಾಬ್ದಾರಿಗಳು, ನಗರ ಯೋಜನೆ ಮತ್ತು ಪರಿಸರ ಶಾಸನ ಮುಂತಾದ ನೀತಿಗಳು ಮತ್ತು ಕಾನೂನುಗಳ ರಚನೆ ಮತ್ತು ಚರ್ಚೆಯಲ್ಲಿ ಅವರು ಪ್ರಮುಖ ಪಾತ್ರ ವಹಿಸುವುದನ್ನು ಖಾತ್ರಿಪಡಿಸುವುದು;

2.9 ವೇಸ್ಟ್ ಪಿಕರ್‌ಗಳಿಗೆ ತ್ಯಾಜ್ಯ ಲಭ್ಯವಾಗುವಂತೆ ಮಾಡಿ ಅವರನ್ನು ಘನತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆ ವ್ಯವಸ್ಥೆಗಳಲ್ಲಿ ಒಳಗೂಡಿಸುವ ಮೂಲಕ ವೇಸ್ಟ್ ಪಿಕರ್‌ಗಳ ಜೀವನೋಪಾಯದ ಸಂರಕ್ಷಣೆಯನ್ನು ಸಮರ್ಥಿಸುವುದು, ಸರ್ಕಾರದ ಎಲ್ಲಾ ಹಂತಗಳು ವೇಸ್ಟ್ ಪಿಕರ್‌ಗಳ ಬೇಡಿಕೆಗಳಿಗೆ ಗಮನಕೊಡುವುದನ್ನು ಖಾತ್ರಿಪಡಿಸುವಂಥ ಕಾರ್ಯತಂತ್ರಗಳ ಮೇಲೆ ಕೆಲಸ ಮಾಡುವುದು, ಸಮಗ್ರ ತ್ಯಾಜ್ಯ ನಿರ್ವಹಣೆಯಲ್ಲಿ ಸಹ-ಭಾಗವಹಿಸುವಿಕೆಯನ್ನು ಉತ್ತೇಜಿಸುವುದು;

2.10 ಮರುಬಳಕೆ, ಘನತ್ಯಾಜ್ಯ ನಿರ್ವಹಣೆ, ಪರಿಸರ ಸಂರಕ್ಷಣೆ, ಮತ್ತು ಹವಾಮಾನ ಬದಲಾವಣೆ ತಗ್ಗಿಸುವಿಕೆಗೆ ವೇಸ್ಟ್ ಪಿಕರ್‌ಗಳ ಕೊಡುಗೆಗಳ ಬಗ್ಗೆ ಸ್ಥಳೀಯ, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಜಾಗೃತಿ ಮೂಡಿಸುವುದು. ಹೆಚ್ಚುವರಿಯಾಗಿ, ಸರ್ಕಾರಿ-ಬೆಂಬಲಿತ ಮರುಬಳಕೆ ಶುಲ್ಕವು ವೇಸ್ಟ್ ಪಿಕರ್‌ಗಳಿಗೆ ಪಾವತಿಯಾಗುವಂತೆ ನೋಡಿಕೊಳ್ಳುವುದು;

2.11 ವಿಷಕಾರಿ ತ್ಯಾಜ್ಯ ಮತ್ತು ಅಪಾಯಕಾರಿ ವಸ್ತುಗಳಿಂದ ಮುಕ್ತವಾದ ಆರೋಗ್ಯಕರ, ಸುರಕ್ಷಿತ ಮತ್ತು ಭದ್ರತೆಯ ಕೆಲಸದ ವಾತಾವರಣವನ್ನು ವೇಸ್ಟ್ ಪಿಕರ್‌ಗಳಿಗೆ ಒದಗಿಸುವ ಸಲುವಾಗಿರುವ ಕಾರ್ಯಕ್ರಮಗಳನ್ನು ಬೆಂಬಲಿಸುವುದು. ಉತ್ಪಾದನಾ ಪ್ರಕ್ರಿಯೆ ಮತ್ತು ವಸ್ತುಗಳಲ್ಲಾಗುವ ಬದಲಾವಣೆಗಳಿಂದ ಉಂಟಾಗುವ ನಕಾರಾತ್ಮಕ ಆರೋಗ್ಯ ಫಲಿತಾಂಶಗಳಿಂದ ಅವರ ರಕ್ಷಣೆಯನ್ನು ಖಚಿತಪಡಿಸುವುದು. ಹೆಚ್ಚುವರಿಯಾಗಿ, ರಾಷ್ಟ್ರೀಯ ಆರೋಗ್ಯ ವಿಮಾ ನಿಧಿಗಳ ಪ್ರಯೋಜನ ಪಡಕೊಳ್ಳುವಂತೆ ಶ್ರಮಿಸುವುದು;

2.12 ವೇಸ್ಟ್ ಪಿಕರ್‌ಗಳ ಜಾಗತಿಕ ಸ್ಥಿತಿಗತಿಯ ವಾಸ್ತವತೆಯನ್ನು ಅರ್ಥಮಾಡಿಕೊಳ್ಳಲು ಅವರು ಎಷ್ಟು ಜನರಿದ್ದಾರೆ, ಅವರ ಪರಿಸ್ಥಿತಿ, ಲಿಂಗ ಮತ್ತು ವಯಸ್ಸು ಮುಂತಾದ ಇತರ ಮಾಹಿತಿಗಳನ್ನು ಒಳಗೊಂಡಂತೆ ವಿಶ್ವಾದ್ಯಂತರುವ ವೇಸ್ಟ್ ಪಿಕರ್‌ಗಳ ಸಮಗ್ರ ಡೇಟಾಬೇಸ್ ರಚಿಸುವುದು;

2.13 ವೇಸ್ಟ್ ಪಿಕರ್‌ಗಳ ಹಕ್ಕುಗಳನ್ನು ಬೆಂಬಲಿಸಿ ರಕ್ಷಿಸಲು ಪರಿಣಾಮಕಾರಿ ಸಂಘಟನಾ ತಂತ್ರಗಳ ಕುರಿತು ಮಾಹಿತಿಯನ್ನು ದಾಖಲಿಸುವುದು ಮತ್ತು ಪ್ರಸಾರ ಮಾಡುವುದು;

2.14 ತಮ್ಮ ಸಂಸ್ಥೆಗಳಲ್ಲಿ ಯುವಜನರ ಸಂಕೀರ್ಣ ವ್ಯವಸ್ಥೆಗಳನ್ನು ಈಗಾಗಲೇ ರಚಿಸಿರದ ಪಕ್ಷದಲ್ಲಿ ಅದನ್ನು ಸ್ಥಾಪಿಸುವಂತೆ ಎಲ್ಲಾ ಅಂಗಸಂಸ್ಥೆಗಳನ್ನು ಪ್ರೋತ್ಸಾಹಿಸುವುದು, ಇದರಲ್ಲಿ ವಿಕಲಚೇತನ ವ್ಯಕ್ತಿಗಳನ್ನು ಒಳಗೂಡಿಸುವುದನ್ನು ಖಚಿತಪಡಿಸುವುದು;

2.15 ಪೋಲೀಸ್ ಮುಂತಾದ ಶಕ್ತಿಯುತ ಸಂಘಟನೆಗಳು ಮತ್ತು ಕಾರ್ಯಕರ್ತರಿಂದ ವೇಸ್ಟ್ ಪಿಕರ್‌ಗಳು ಎದುರಿಸುತ್ತಿರುವ ತಾರತಮ್ಯ, ಕಿರುಕುಳ ಮತ್ತು ಅಗೌರವವನ್ನು ವಿರೋಧಿಸುವುದು;

2.16 ವೇಸ್ಟ್ ಪಿಕರ್‌ಗಳ ಮಕ್ಕಳ ಶಿಕ್ಷಣ ಸೌಲಭ್ಯ ಹೆಚ್ಚಿಸಲು ಮತ್ತು ಬಾಲಕಾರ್ಮಿಕರನ್ನು ನಿರ್ಮೂಲನೆ ಮಾಡಲು ಶಿಶುಪಾಲನಾ ಕೇಂದ್ರಗಳನ್ನು ಸಮೀಪಿಸುವುದರಲ್ಲಿ ಸುಧಾರಣೆ ತರಲು ಅಂಗಸಂಸ್ಥೆಗಳು, ಸರ್ಕಾರಗಳು ಮತ್ತು ಸಂಸ್ಥೆಗಳೊಂದಿಗೆ ಜೊತೆಗೂಡುವುದು;

2.17 ಸ್ಥಳೀಯ, ರಾಷ್ಟ್ರೀಯ, ಪ್ರಾದೇಶಿಕ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ತ್ಯಾಜ್ಯ ಸುಡುವಿಕೆ ಸೇರಿದಂತೆ ಎಲ್ಲಾ ರೀತಿಯ ಸಮರ್ಥನೀಯವಲ್ಲದ ತ್ಯಾಜ್ಯ ನಿರ್ವಹಣೆ ರೂಢಿಗಳನ್ನು ವಿರೋಧಿಸುವುದು; (ತ್ಯಾಜ ಸುಡುವಿಕೆ ಸಲ್ಲದು)

2.18 ವೇಸ್ಟ್ ಪಿಕರ್‌ಗಳ ಜೀವನೋಪಾಯದ ಮೇಲೆ ಕೆಟ್ಟ ಪರಿಣಾಮ ಬೀರುವ ತ್ಯಾಜ್ಯ ನಿರ್ವಹಣೆ ಮತ್ತು ಮರುಬಳಕೆಯ ವಲಯಗಳಲ್ಲಿನ ಅನ್ಯಾಯದ ವ್ಯಾಪಾರ ಪದ್ಧತಿಗಳನ್ನು ತೊಡೆದುಹಾಕಲು ಕೆಲಸ ಮಾಡುವುದು;

2.19 ಎಲ್ಲಾ ವೇಸ್ಟ್ ಪಿಕರ್‌ಗಳಿಗೆ ಔದ್ಯೋಗಿಕ ಗುರುತು, ಸಮಾಜ ಕಲ್ಯಾಣ, ಸಾಮಾಜಿಕ ಭದ್ರತೆ, ಮತ್ತು ಲಿಂಗ-ಸೂಕ್ಷ್ಮ ವೈಯಕ್ತಿಕ ಸುರಕ್ಷಾ ಸಾಧನ ಸಿಗುವಂತೆ ಪ್ರಯತ್ನಿಸುವುದು;

2.20 ಅಂತರಾಷ್ಟ್ರೀಯ ಒಕ್ಕೂಟಗಳು, ಅನೌಪಚಾರಿಕ ಕಾರ್ಮಿಕರನ್ನು ಪ್ರತಿನಿಧಿಸುವ ಸಂಘಟನೆಗಳು ಮತ್ತು ಟ್ರೇಡ್ ಯೂನಿಯನ್‌ಗಳೊಂದಿಗೆ ಪಾಲುದಾರಿಕೆಯನ್ನು ಬೆಳೆಸಿಕೊಂಡು ಪರಸ್ಪರ ಪೂರಕವಾಗಿರುವ ಹಿತಾಸಕ್ತಿಗಳನ್ನು ಚರ್ಚಿಸುವುದು;

2.21 ವೇಸ್ಟ್ ಪಿಕರ್‌ಗಳನ್ನು ಬೆಂಬಲಿಸುವ ಹಾಗೂ ಅಲೈಯನ್ಸ್‌ನ ಗುರಿಗಳನ್ನು ಮತ್ತು ಸಂವಿಧಾನವನ್ನು ಬೆಂಬಲಿಸುವ NGO ಗಳು, ವಿಶ್ವವಿದ್ಯಾನಿಲಯಗಳು ಮತ್ತು ಸಂಶೋಧನಾ ಸಂಸ್ಥೆಗಳೊಂದಿಗೆ ಸಾಮಾಜಿಕ ಸಹಭಾಗಿತ್ವವನ್ನು ಸ್ಥಾಪಿಸುವುದು;

2.22 ಈ ಸಂವಿಧಾನದಲ್ಲಿ ವಿವರಿಸಿರುವ ಉದ್ದೇಶಗಳಿಗೆ ಅನುಗುಣವಾಗಿ ವಿವಿಧ ವಿಧಾನಗಳ (ನಿಧಿಸಂಗ್ರಹಣೆಯಂತಹ) ಮೂಲಕ ಸ್ವಾಧೀನಪಡಿಸಿಕೊಂಡಿರುವ ಸಂಪನ್ಮೂಲಗಳನ್ನು ನಿರ್ವಹಿಸಿ ಮತ್ತು ವಿತರಿಸಿ, ಅವುಗಳ ಆಡಳಿತ ಮತ್ತು ಮೇಲ್ವಿಚಾರಣೆಗಾಗಿ ಒಮ್ಮತದ ಮತ್ತು ಸ್ಪಷ್ಟವಾದ ಕಾರ್ಯವಿಧಾನಗಳನ್ನು ಬಳಸಿಕೊಳ್ಳುವುದು.

# 3. ವ್ಯಾಪ್ತಿ

ಈ ಇಂಟರ್ನ್ಯಾಷನಲ್ ಅಲೈಯನ್ಸ್ ಅನ್ನುವುದು ವೇಸ್ಟ್ ಪಿಕರ್‌ಗಳ ಒಂದು ಟ್ರೇಡ್ ಯೂನಿಯನ್ ಆಗಿದೆ. ಇದರ ವ್ಯಾಪ್ತಿಯು ಪ್ರಪಂಚದಾದ್ಯಂತ ಇರುವ ಸಕಲ ವೇಸ್ಟ್ ಪಿಕರ್‌ಗಳ ಉಪವರ್ಗಗಳ ರಕ್ಷಣೆಗಾಗಿ ಶ್ರಮಿಸುತ್ತಿರುವ ಸಂಸ್ಥೆಗಳನ್ನು ಪ್ರತಿನಿಧಿಸುವ ವೇಸ್ಟ್ ಪಿಕರ್‌ಗಳನ್ನು ಒಳಗೂಡುತ್ತದೆ, ಇದರಲ್ಲಿ ಪರಿಸರ ಬಗ್ಗೆ ಕಾಳಜಿವಹಿಸಿ ತಮ್ಮ ಸಂಸ್ಥೆಗಳಲ್ಲಿ ಆಡಳಿತಾತ್ಮಕ ಬೆಂಬಲ ನೀಡುವಂಥ ಮತ್ತಿತ್ತರ ಕಾರ್ಯಗಳನ್ನು ಮಾಡುವ ವೇಸ್ಟ್ ಪಿಕರ್‌ಗಳು ಸೇರಿರುತ್ತಾರೆ.

3.1 ಇಂಟರ್ನ್ಯಾಷನಲ್ ಅಲೈಯನ್ಸ್‌ನಲ್ಲಿ ವೇಸ್ಟ್ ಪಿಕರ್ಸ್ ಬಗ್ಗೆ ಕೆಳಗಿನ ನಿರೂಪಣೆಯಿದೆ:

a. ಸ್ವಂತವಾಗಿ ಅನೌಪಚಾರಿಕವಾಗಿಯೋ ಅರೆ-ಔಪಚಾರಿಕವಾಗಿಯೋ ಮರುಬಳಕೆ ಮಾಡಬಹುದಾದ ವಸ್ತುಗಳನ್ನು (ಕಾಗದ, ಪ್ಲಾಸ್ಟಿಕ್, ಲೋಹ, ಗಾಜು ಇತ್ಯಾದಿ) ಸಂಗ್ರಹಿಸುವ, ಬೇರ್ಪಡಿಸುವ, ವಿಂಗಡಿಸುವ ಮತ್ತು ಮಾರಾಟದಲ್ಲಿ ತೊಡಗಿರುವ ವ್ಯಕ್ತಿಗಳು;

b. ಸಂಚಾರಿ ವೇಸ್ಟ್ ಪಿಕರ್ಸ್, ಮರುಬಳಕೆ ಮಾಡಬಹುದಾದ ವಸ್ತುಗಳ ಸಾಗಾಟ, ವಿಂಗಡಣೆ ಮತ್ತು ಮಾರಾಟದಲ್ಲಿ ತೊಡಗಿರುವ ಅನೌಪಚಾರಿಕ/ಅರೆ-ಔಪಚಾರಿಕ ತ್ಯಾಜ್ಯ ಸಂಗ್ರಾಹಕರು, ಅನೌಪಚಾರಿಕ ಅಥವಾ ಅರೆ-ಔಪಚಾರಿಕ ವಿಂಗಡಣೆ/ಮರುಪಡೆಯುವಿಕೆ/ಮರುಬಳಕೆ ವಲಯದಲ್ಲಿ ಸಾಗಾಟ ಅಥವಾ ವಿಂಗಡಣೆಯಲ್ಲಿ ತೊಡಗಿರುವ ಅನೌಪಚಾರಿಕ ಕಾರ್ಮಿಕರು, ಅಥವಾ ಮೇಲಿನ ಯಾವುದೇ ವರ್ಗಕ್ಕೆ ಸೇರಿದ್ದು ಪುರಸಭೆಯ ತ್ಯಾಜ್ಯ ನಿರ್ವಹಣಾ ವ್ಯವಸ್ಥೆಗಳಲ್ಲಿ ಒಳಗೂಡಿ ಮರುಬಳಕೆ ಮಾಡಬಹುದಾದ ವಸ್ತುಗಳನ್ನು ವಿಂಗಡಿಸಿ ಮಾರಾಟ ಮಾಡುವುದರಲ್ಲಿ ನಿರತರಾಗಿರುವ ವ್ಯಕ್ತಿಗಳು;

c. ಈ ಮುಂಚೆ ಮರುಬಳಕೆ ಕಾರ್ಮಿಕರಾಗಿದ್ದು, ಪರಿಸರ ಕಾಳಜಿ, ಆರೈಕೆ, ಆರೋಗ್ಯ ಕಾರ್ಯಕ್ರಮ, ಲಿಂಗ ಕಾರ್ಯಕ್ರಮ ಮುಂತಾದವುಗಳಲ್ಲಿ ತೊಡಗಿರುವಂಥ ಮರುಬಳಕೆ ಸಂಸ್ಥೆಗಳಲ್ಲಿ ಈಗ ಹೊಸ ಪಾತ್ರ ನಿರ್ವಹಿಸುತ್ತಿರುವವರು.

3.2 ಸಂಸ್ಥೆಯ ವಿಧ:

ಕೆಳಗಿನವುಗಳಲ್ಲಿ ಪ್ರತಿಯೊಂದನ್ನು ಅನುಸರಿಸುವ ಸ್ಥಳೀಯ, ರಾಷ್ಟ್ರೀಯ ಅಥವಾ ಪ್ರಾದೇಶಿಕ ಸಂಸ್ಥೆಗಳು ಅಲೈಯನ್ಸ್‌ನ ಸದಸ್ಯರಾಗಬಹುದು:

a. ಪ್ರಜಾಸತ್ತಾತ್ಮಕವಾಗಿರಬೇಕು ಮತ್ತು ಜವಾಬ್ದಾರಿಯುತವಾಗಿರಬೇಕು;

b. ಸದಸ್ಯತ್ವ ಆಧಾರಿತವಾಗಿರಬೇಕು, ಅಂದರೆ ಅನೌಪಚಾರಿಕ ವೇಸ್ಟ್ ಪಿಕರ್‌ಗಳ ಮಾಲೀಕತ್ವ ಅಥವಾ ನಿಯಂತ್ರಣದಲ್ಲಿರಬೇಕು, ಉದಾ. ಸಹಕಾರ ಸಂಸ್ಥೆಗಳು, ಟ್ರೇಡ್ ಯೂನಿಯನ್‌ಗಳು, ಸಂಘಗಳು ಇತ್ಯಾದಿ;

c. ಮುಖ್ಯವಾಗಿ ಅನೌಪಚಾರಿಕ ವೇಸ್ಟ್ ಪಿಕರುಗಳನ್ನು ಪ್ರತಿನಿಧಿಸಬೇಕು;

d. ತಮ್ಮ ಸದಸ್ಯರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳನ್ನು ಕಳಂಕರಹಿತಗೊಳಿಸಿ ಸುಧಾರಿಸುವ ಗುರಿ ಹೊಂದಿರಬೇಕು;

e. UDHR, 1948ರಲ್ಲಿ ಪ್ರತಿಪಾದಿಸಲಾದ ಮಾನವ ಹಕ್ಕುಗಳ ಮೂಲ ತತ್ವಗಳಿಗೆ ಬದ್ಧವಾಗಿರಬೇಕು;

f. ತಮ್ಮ ಸದಸ್ಯರು ಅನುಮೋದಿಸಿದ ಪ್ರಜಾಪ್ರಭುತ್ವ ಮತ್ತು ಕಾನೂನು ತತ್ವಗಳ ಆಧಾರದ ಮೇಲೆ ಲಿಖಿತ ಸಂವಿಧಾನವನ್ನು ಹೊಂದಿರಬೇಕು ಮತ್ತು ನಿಯಮಿತ ಹಣಕಾಸು ವರದಿಗಳನ್ನು ಹೊಂದಿರಬೇಕು.

# 4. ಸದಸ್ಯತ್ವ

4.1 ಯಾವುದೇ ಅರ್ಹ ಸಂಸ್ಥೆಯು ಅಗತ್ಯ ವಿವರ ಮತ್ತು ದಾಖಲೆಗಳೊಂದಿಗೆ ಲಿಖಿತ ಅರ್ಜಿಯನ್ನು ಸಲ್ಲಿಸಬಹುದು (ಅನುಬಂಧಿತ ನಿಬಂಧನೆಗಳನ್ನು ನೋಡಿ);

4.2 ಅರ್ಜಿದಾರರ ಅರ್ಹತೆಗೆ ಸಂಬಂಧಿಸಿದಂತೆ ರಾಷ್ಟ್ರ/ಪ್ರದೇಶದಲ್ಲಿರುವ ಸದಸ್ಯರ ಪ್ರತಿಕ್ರಿಯೆ/ಪರಿಶೀಲನೆಯ ಆಧಾರದ ಮೇಲೆ ಸದಸ್ಯತ್ವವನ್ನು ದೃಢೀಕರಿಸಲಾಗುತ್ತದೆ;

4.3 ಈ ಸಂವಿಧಾನದಲ್ಲಿನ ಸದಸ್ಯತ್ವದ ಅವಶ್ಯಕತೆಗಳ ಆಧಾರದ ಮೇಲೆ ಕಾರ್ಯಕಾರಿ ಸಮಿತಿಯು ಅರ್ಜಿ ಸ್ವೀಕಾರ ಅಥವಾ ತಿರಸ್ಕಾರವನ್ನು ನಿರ್ಧರಿಸುತ್ತದೆ;

4.4 ಅರ್ಜಿ ಸಲ್ಲಿಸಿರುವ ಸಂಸ್ಥೆಗಳ ಸತ್ಯಾಸತ್ಯತೆಯನ್ನು ಪರಿಶೀಲಿಸುವ ಒಂದು ಚೌಕಟ್ಟನ್ನು ಈ ಉದ್ದೇಶಕ್ಕಾಗಿ 3. ವ್ಯಾಪ್ತಿ ಎಂಬ ಮೇಲಿನ ಕಲಂಗೆ ಅನುಗುಣವಾಗಿ ಅಭಿವೃದ್ಧಿಪಡಿಸಲಾಗುವುದು;

4.5 ಒಂದು ಸಂಸ್ಥೆಯ ಮತಗಳನ್ನು ಸಂಸ್ಥೆಗೆ ಸೇರಿದ ಸಕ್ರಿಯ, ಪಾವತಿಸಿದ ಸದಸ್ಯರ ಸಂಖ್ಯೆಯನ್ನು ಆಧರಿಸಿ ಅನುಪಾತದ ಪ್ರಾತಿನಿಧ್ಯದ ತತ್ವದ ಮೇಲೆ ನಿರ್ಧರಿಸಲಾಗುತ್ತದೆ;

4.6 ಬಹು-ವಲಯ ಸಂಸ್ಥೆಗಳನ್ನು (ಮೇಲಿನ ಕಲಂ 3.2(c) ಪ್ರಕಾರ) ತಮ್ಮ ವೇಸ್ಟ್ ಪಿಕರ್‌ಗಳ ಘಟಕದ ಸದಸ್ಯರು ಪ್ರತಿನಿಧಿಸುತ್ತಾರೆ;

4.7 ಸದಸ್ಯತ್ವದ ನವೀಕರಣವು ವಾರ್ಷಿಕ ಸದಸ್ಯತ್ವ ಶುಲ್ಕಗಳ ಪಾವತಿ ಮತ್ತು ಅಲೈಯನ್ಸ್‌ನ ಇತರ ಜವಾಬ್ದಾರಿಗಳನ್ನು ಪೂರೈಸುವುದರ ಮೇಲೆ ಅವಲಂಬಿಸಿರುತ್ತದೆ.

# 5. ಸದಸ್ಯತ್ವವನ್ನು ಕೊನೆಗಾಣಿಸುವುದು

5.1 ಯಾವುದೇ ಸದಸ್ಯ ಸಂಸ್ಥೆಯು ಕಾರ್ಯಕಾರಿ ಸಮಿತಿಗೆ ಕಡಿಮೆ ಪಕ್ಷ ಮೂರು (3) ತಿಂಗಳ ನೋಟಿಸ್ ಕೊಡುವ ಮೂಲಕ ಅಲೈಯನ್ಸ್‌ನಿಂದ ನಿರ್ಗಮಿಸಬಹುದು. ನಿರ್ಗಮಿಸುವ ಸನ್ನಿವೇಶದಲ್ಲಿ ರಾಜಿನಾಮೆ ನೀಡಿರುವ ಸದಸ್ಯ ಸಂಸ್ಥೆಗೆ ಫೀಸ್ ಅನ್ನು ವಾಪಾಸು ಮಾಡಲಾಗುವುದಿಲ್ಲ;

5.2 ಸಂವಿಧಾನದ ತತ್ವಗಳನ್ನು ಮತ್ತು ನಿಬಂಧನೆಗಳನ್ನು ಮೀರುವಲ್ಲಿ, ಕಲಂ 4 ರಲ್ಲಿನ ಅರ್ಹತೆಗಳನ್ನು ಕಳಕೊಂಡಲ್ಲಿ ಅಥವಾ ಅಲೈಯನ್ಸ್ ಅಥವಾ ವೇಸ್ಟ್ ಪಿಕರ್ಸ್‌ಗಳ ಹಿತಾಸಕ್ತಿಗೆ ವಿರುದ್ಧವಾದ ಕಾರ್ಯಗಳನ್ನು ಮಾಡುವಲ್ಲಿ ಅಲೈಯನ್ಸ್‌ನಿಂದ ಒಂದು ಸದಸ್ಯ ಸಂಸ್ಥೆಯನ್ನು ಸಸ್ಪೆಂಡ್ ಮಾಡಬಹುದು ಇಲ್ಲವೇ ಹೊರಹಾಕಬಹುದು;

5.3 ಕಾರ್ಯಕಾರಿ ಸಮಿತಿಯು ಯಾವುದೇ ಸದಸ್ಯ ಸಂಸ್ಥೆಯನ್ನು ಕಲಂ 5.2 ರಲ್ಲಿನ ಕಾರಣಗಳನ್ನು ನೀಡಿ ಸಸ್ಪೆಂಡ್ ಮಾಡಬಹುದು ಇಲ್ಲವೇ ಹೊರಹಾಕಬಹುದು. ಸಸ್ಪೆಂಡ್ ಅಥವಾ ಹೊರಹಾಕುವ ಪ್ರಸ್ತಾಪ ಬಂದಾಗ ಕಾರ್ಯಕಾರಿ ಸಮಿತಿಯು ಸ್ವಾಭಾವಿಕ ನ್ಯಾಯದ ತತ್ವಗಳನ್ನು ಅನುಸರಿಸುತ್ತದೆ ಮತ್ತು ಸದಸ್ಯನಿಗೆ ತನ್ನ ಅಹವಾಲು ತೋಡಿಕೊಳ್ಳುವ ಅವಕಾಶ ನೀಡುತ್ತದೆ. ಅಂತಹ ವಿಚಾರಣೆಯನ್ನು ಸದಸ್ಯ ಸಂಸ್ಥೆಗಳು ಒಳಗೂಡಿರುವ ಒಂದು ಸ್ವತಂತ್ರ ಸಮಿತಿ ನಡೆಸುತ್ತದೆ, ಆ ಸಮಿತಿಯಲ್ಲಿ ಇರುವವರು ಪ್ರಸ್ತುತ ಕಾರ್ಯಕಾರಿ ಸಮಿತಿಯಲ್ಲಿ ಸೇವೆ ಸಲ್ಲಿಸುವವರೋ ಅಥವಾ ಅದೇ ಸಂಸ್ಥೆ ಅಥವಾ ಪ್ರದೇಶದಿಂದ ಚುನಾಯಿಸಲ್ಪಟ್ಟಿರುವ ಸದಸ್ಯರೋ ಆಗಿರುವುದಿಲ್ಲ. ಅಂತಹ ಯಾವುದೇ ನಿರ್ಧಾರವನ್ನು ಕಾಂಗ್ರೆಸ್ ತನ್ನ ಮುಂದಿನ ಸಭೆಯಲ್ಲಿ ಸ್ಥಿರಪಡಿಸುವುದು. ಸಸ್ಪೆಂಡ್ ಆಗಿರುವ ಇಲ್ಲವೇ ಹೊರಹಾಕಲಾಗಿರುವ ಸದಸ್ಯ ಸಂಸ್ಥೆಯು ಕಾಂಗ್ರೆಸ್ ಮುಂದಿನ ಸಭೆಸೇರುವ ಮುಂಚೆ ಅಪೀಲು

ಮಾಡಬಹುದಾಗಿದ್ದು ಸದಸ್ಯತ್ವ ಮುಂದುವರಿಯಲು ತನಗಿರುವ ಅರ್ಹತೆಗೆ ಆಧಾರವನ್ನು ದಾಖಲೆ ವಿವರ ಸಮೇತ ಲಿಖಿತ ರೂಪದಲ್ಲಿ ನೀಡತಕ್ಕದ್ದು;

5.4 ಸಸ್ಪೆಂಡ್ ಆಗಿರುವ ಇಲ್ಲವೇ ಹೊರಹಾಕಲಾಗಿರುವ ಸದಸ್ಯ ಸಂಸ್ಥೆಗೆ ಫೀಸಾಗಲಿ ಅಲೈಯನ್ಸ್‌ನಿಂದ ಬಾಕಿ ಇರುವ ಮೊತ್ತವಾಗಲಿ ವಾಪಾಸು ಸಿಗುವುದಿಲ್ಲ, ಮಾತ್ರವಲ್ಲ ಅಲೈಯನ್ಸ್‌ನ ಸದಸ್ಯರಿಗೆ ಸಿಗುವ ಯಾವುದೇ ಸೌಲಭ್ಯಗಳು, ಹಕ್ಕುಗಳು ಅಥವಾ ಅನುಕೂಲತೆಗಳು ದೊರೆಯುವುದಿಲ್ಲ.

# 6. ಸದಸ್ಯತ್ವದ ಶುಲ್ಕಗಳು

6.1 ಅಂಗಸಂಸ್ಥೆ ಶುಲ್ಕಗಳು ಮತ್ತು ವಾರ್ಷಿಕ ಸದಸ್ಯತ್ವ ಶುಲ್ಕಗಳನ್ನು ಕಾರ್ಯಕಾರಿ ಸಮಿತಿ ನಿರ್ಧರಿಸುತ್ತದೆ, ಇದು ಸಂಘಟಿಸಲು ಮತ್ತು ಹೋರಾಡಲು ಅಗತ್ಯವಿರುವ ವಲಯದ ಅನೌಪಚಾರಿಕ ಗುಣಲಕ್ಷಣಗಳನ್ನು ಗಣನೆಗೆ ತೆಗೆದುಕೊಳ್ಳುವ ಅಂತರ್ಗತ ಕಾರ್ಯವಿಧಾನಗಳನ್ನು ಅಭಿವೃದ್ಧಿಪಡಿಸಲು ಶ್ರಮಿಸುವುದಕ್ಕಾಗಿ ಮತ್ತು ಇದರಲ್ಲಿ ಆರ್ಥಿಕ ಶುಲ್ಕಗಳು ಪ್ರತ್ಯೇಕವಾಗಿಲ್ಲ;

6.2 ಶುಲ್ಕವನ್ನು ಪ್ರತಿ ಕ್ಯಾಲೆಂಡರ್ ವರ್ಷದಲ್ಲಿ ಏಪ್ರಿಲ್ 30 ರ ಮುಂಚಿತವಾಗಿ ಪಾವತಿಸಬೇಕು. ಪಾವತಿಸದ ಪಕ್ಷದಲ್ಲಿ ಸದಸ್ಯತ್ವ ಸಸ್ಪೆಂಡ್‌ಗೊಳ್ಳುತ್ತದೆ, ಅದರೊಂದಿಗೆ ಹಕ್ಕು ಮತ್ತು ಸೌಲಭ್ಯಗಳು, ಮತ ಹಾಕುವ ಹಕ್ಕುಗಳು ಮತ್ತು ಯಾವುದೇ ಕಮಿಟಿಯಲ್ಲಿ ಸದಸ್ಯತ್ವ ಪಡೆಯುವುದು ಸ್ಥಗಿತಗೊಳ್ಳುತ್ತದೆ. ಯಾವುದೇ ಸದಸ್ಯ ಸಂಸ್ಥೆಯು ಒಂದು ವರ್ಷದ ಶುಲ್ಕವನ್ನು ಪಾವತಿಸದಿರುವಲ್ಲಿ ಅದರ ಸದಸ್ಯತ್ವವನ್ನು ಅಮಾತಿನಲ್ಲಿಡಲಾಗುತ್ತದೆ ಮತ್ತು ಆ ಸಂಸ್ಥೆಯು ಮತ ಹಾಕುವ ಹಕ್ಕನಾಗಲಿ ಸದಸ್ಯರಿಗೆ ಸಿಗುವ ಅನುಕೂಲತೆಗಳನ್ನಾಗಲಿ ಪಡೆಯುವುದಿಲ್ಲ. ಎರಡು ವರ್ಷ ಶುಲ್ಕ ಪಾವತಿಸದಿದ್ದಲ್ಲಿ ಸದಸ್ಯತ್ವ ರದ್ದಾಗುವುದು;

6.3 ಒಂದು ಅಥವಾ ಹೆಚ್ಚಿನ ಸದಸ್ಯರಿಗೆ ಅಸಾಮಾನ್ಯ ಪರಿಸ್ಥಿತಿಗಳ ಕಾರಣ ಅಂಗಸಂಸ್ಥೆ/ವಾರ್ಷಿಕ ಶುಲ್ಕದಲ್ಲಿನ ವಿನಾಯಿತಿ ನೀಡುವುದನ್ನು ಕಾರ್ಯಕಾರಿ ಸಮಿತಿಯು ನಿರ್ಧರಿಸಬಹುದು. ಆದರೆ ಅಂತಹ ವಿನಾಯಿತಿಯನ್ನು ಆಯಾ ಸಂದರ್ಭದ ಮೇಲಾಧರಿಸಿ ಕಾರ್ಯಕಾರಿ ಸಮಿತಿ ನಿರ್ಣಯಿಸುತ್ತದೆ.

# 7. ಕೇಂದ್ರೀಯ ಸಂಘಟಿತ ವ್ಯವಸ್ಥೆ

ಅಲೈಯನ್ಸ್ ಈ ಕೆಳಗಿನ ಆಡಳಿತ ರಚನೆಗಳ ಅಡಿಯಲ್ಲಿ ಕಾರ್ಯನಿರ್ವಹಿಸುತ್ತದೆ:

## 7.1 ಕಾಂಗ್ರೆಸ್

7.1.1 ಅಲೈಯನ್ಸ್‌ನ ನಿರ್ಧಾರ ತೆಗೆದುಕೊಳ್ಳುವ ಅತ್ಯುನ್ನತ ಸಂಸ್ಥೆಯಾಗಿ ಕಾಂಗ್ರೆಸ್ ಕಾರ್ಯನಿರ್ವಹಿಸುತ್ತದೆ;

7.1.2 ಇದು ಎಲ್ಲಾ ವೇಸ್ಟ್ ಪಿಕರ್‌ಗಳ ಸಂಸ್ಥೆಗಳು, ಅಂಗಸಂಸ್ಥೆಗಳು ಮತ್ತು ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯನ್ನು ಒಳಗೊಂಡಿದೆ;

7.1.3 ಕಾಂಗ್ರೆಸ್‌ನ ಅಧ್ಯಕ್ಷತೆಯನ್ನು ಅಧ್ಯಕ್ಷ ವಹಿಸುತ್ತಾರೆ (ಕೆಳಗಿನ ಕಲಂ 8.4 ರಲ್ಲಿರುವಂತೆ ಚುನಾಯಿಸಲ್ಪಡುತ್ತಾರೆ);

7.1.4 ಕಾಂಗ್ರೆಸ್ ಅನ್ನು ಕಾರ್ಯಕಾರಿ ಸಮಿತಿ (ಕೆಳಗಿನ ಕಲಂ 8.4 ರಲ್ಲಿರುವಂತೆ ಚುನಾಯಿಸಲ್ಪಡುತ್ತಾರೆ) ಮಾರ್ಗದರ್ಶಿಸುತ್ತದೆ;

7.1.5 ಕಾರ್ಯಕಾರಿ ಸಮಿತಿಯು ಪ್ರತಿ ಕಾಂಗ್ರೆಸ್‌ನ ದಿನಾಂಕ, ಸ್ಥಳ, ಕಾರ್ಯಸೂಚಿ ಮತ್ತು ಕಾರ್ಯವಿಧಾನಗಳನ್ನು ನಿರ್ಧರಿಸುತ್ತದೆ;

7.1.6 ಕಾರ್ಯಕಾರಿ ಸಮಿತಿ ಕನಿಷ್ಠ ನಾಲ್ಕು (4) ತಿಂಗಳ ಮುಂಚಿತವಾಗಿ ಕಾಂಗ್ರೆಸ್‌ನ ದಿನಾಂಕ ಮತ್ತು ಸ್ಥಳದ ವಿವರವನ್ನು ಅಂಗಸಂಸ್ಥೆಗಳಿಗೆ ತಿಳಿಸುತ್ತದೆ;

7.1.7 ಕಾಂಗ್ರೆಸ್ ಕನಿಷ್ಠ ಐದು (5) ವರ್ಷಗಳಿಗೊಮ್ಮೆ ಸಭೆ ಸೇರುತ್ತದೆ;

7.1.8 ಕಾರ್ಯಕಾರಿ ಸಮಿತಿಗೆ ವಿಶೇಷ ಕಾಂಗ್ರೆಸ್ ಅನ್ನು ಏರ್ಪಡಿಸುವ ಅಧಿಕಾರವಿರುತ್ತದೆ;

7.1.9 ಅಂಗಸಂಸ್ಥೆಗಳ ಸರಳ ಬಹುಮತದ ಮನವಿಯ ಮೇಲೆ ಸಹ ವಿಶೇಷ ಕಾಂಗ್ರೆಸ್ ಅನ್ನು ಏರ್ಪಡಿಸಬಹುದು;

7.1.10 ಪ್ರತಿ ಸಂಸ್ಥೆಗೆ ಎಷ್ಟು ಸಂಖ್ಯೆಯ ಕಾಂಗ್ರೆಸ್ ಪ್ರತಿನಿಧಿಗಳು ಎನ್ನುವುದನ್ನು ಈ ಕೆಳಗಿನಂತೆ ಪ್ರತಿ ಅಂಗಸಂಸ್ಥೆಯಲ್ಲಿರುವ ಪಾವತಿಸಿದ ಸದಸ್ಯರ ಸಂಖ್ಯೆಯ ಮೇಲಾಧರಿಸಿ ನಿರ್ಧರಿಸಲಾಗುತ್ತದೆ:

a. 1-100 ಸದಸ್ಯರಿರುವ ಅಂಗಸಂಸ್ಥೆಗಳು ಒಬ್ಬ (1) ಮತದಾನದ ಪ್ರತಿನಿಧಿ ಹೊಂದಲು ಅರ್ಹವಾಗುತ್ತದೆ;
b. 101-1000 ಸದಸ್ಯರಿರುವ ಅಂಗಸಂಸ್ಥೆಗಳು ಎರಡು (2) ಮತದಾನದ ಪ್ರತಿನಿಧಿಗಳನ್ನು ಹೊಂದಲು ಅರ್ಹವಾಗುತ್ತದೆ;
c. 1001-5000 ಸದಸ್ಯರಿರುವ ಅಂಗಸಂಸ್ಥೆಗಳು ಮೂರು (3) ಮತದಾನದ ಪ್ರತಿನಿಧಿಗಳನ್ನು ಹೊಂದಲು ಅರ್ಹವಾಗುತ್ತದೆ;
d. 5000 ಕ್ಕಿಂತ ಜಾಸ್ತಿ ಸದಸ್ಯರಿರುವ ಅಂಗಸಂಸ್ಥೆಗಳು ನಾಲ್ಕು (4) ಮತದಾನದ ಪ್ರತಿನಿಧಿಗಳನ್ನು ಹೊಂದಲು ಅರ್ಹವಾಗುತ್ತದೆ;
e. ರಾಷ್ಟ್ರೀಯ ಸದಸ್ಯತ್ವ ಆಧಾರಿತ ಸಂಸ್ಥೆಗಳು ದೇಶದಲ್ಲಿ ಇರುವುದಾದರೆ ಪ್ರತಿನಿಧಿಗಳನ್ನು ಆ ಸಂಸ್ಥೆಗಳಿಂದ ಆಯ್ಕೆ ಮಾಡಲಾಗುತ್ತದೆ. ರಾಷ್ಟ್ರೀಯ ಸಂಸ್ಥೆಗಳು ಇಲ್ಲದಿದ್ದರೆ ಅಂತರರಾಷ್ಟ್ರೀಯ ಅಲೈಯನ್ಸ್‌ನಲ್ಲಿ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಸೂಕ್ತ ಮಾನದಂಡಗಳನ್ನು ಸ್ಥಾಪಿಸಲಾಗುತ್ತದೆ.

7.1.11 ಕನಿಷ್ಠ ಐವತ್ತು ಪ್ರತಿಶತ (50%) ಕಾಂಗ್ರೆಸ್ ಪ್ರತಿನಿಧಿಗಳು ಮಹಿಳೆಯರು, ನಾನ್-ಬೈನರಿ ಅಥವಾ ತೃತೀಯ ಲಿಂಗಿಗಳಾಗಿರಬೇಕು;

7.1.12 ಶುಲ್ಕವನ್ನು ಪಾವತಿಸಿದ ಸಂಸ್ಥೆಗಳಿಗೆ ಮಾತ್ರ ಪ್ರತಿನಿಧಿಸುವ ಹಕ್ಕಿದೆ;

7.1.13 ಕಾರ್ಯಕಾರಿ ಸಮಿತಿಯ ವಿವೇಚನೆಯೊಂದಿಗೆ ಅಲೈಯನ್ಸ್‌ನ ಸ್ಟಾಫ್ ಸಹ ಹಾಜರಾಗಬಹುದು;

7.1.14 ಪ್ರತಿನಿಧಿಯಾಗಲು ಇರುವ ಎಲ್ಲ ಆವಶ್ಯಕತೆಗಳನ್ನು ಪೂರ್ತಿಗೊಳಿಸಿರುವವರ ಒಟ್ಟು ಸಂಖ್ಯೆಯಲ್ಲಿ (50%) + ಒಂದು (1) ಪ್ರತಿನಿಧಿ ಹಾಜರಾಗುವಾಗ ನಿಗದಿ ಸಂಖ್ಯೆ ಪೂರ್ತಿಗೊಳ್ಳುತ್ತದೆ. ತಾಸುಗಳೊಳಗೆ ನಿಗದಿ ಸಂಖ್ಯೆ ಪೂರ್ತಿಯಾಗದಿದ್ದಲ್ಲಿ ಕಾಂಗ್ರೆಸ್ ಮುಂದೂಡಲ್ಪಡುತ್ತದೆ;

7.1.15 ಅಜೆಂಡವನ್ನು ಕಾರ್ಯಕಾರಿ ಸಮಿತಿ ನಿರ್ಧರಿಸುತ್ತದೆ ಮತ್ತು ಕೆಳಗಿನವುಗಳನ್ನು ಒಳಗೂಡುತ್ತದೆ:

a. ಸಂವಿಧಾನ, ನಿಬಂಧನೆ, ನಿಯಮಗಳ ಸ್ವೀಕರಣೆ ಮತ್ತು ಸುಧಾರಣೆ;
b. ಸಿಬ್ಬಂದಿ ಮತ್ತು ಅಧ್ಯಕ್ಷನ ವರದಿಗಳು;
c. ಕಾರ್ಯಕಾರಿ ಸಮಿತಿ/ಅಂಗಸಂಸ್ಥೆಗಳು ಪ್ರಸ್ತಾಪಿಸಿರುವ ಪಾಲಿಸಿ ಅನುಮೋದನೆಗಳು ಮತ್ತು ಠರಾವುಗಳು;
d. ಅನುಮೋದನೆಗಾಗಿರುವ ಹಣಕಾಸು ವರದಿ;
e. ಅನುಮೋದನೆಗಾಗಿರುವ ಕಮಿಟಿಗಳು, ಚುನಾವಣೆ, ಯೂತ್, ಪ್ರಾದೇಶಿಕ ಹಾಗೂ ವಿಷಯಾಧರಿತ ಕಮಿಟಿಗಳು ಸಹ;

## 7.2 ಕಾರ್ಯಕಾರಿ ಸಮಿತಿ

7.2.1 ಕಾರ್ಯಕಾರಿ ಸಮಿತಿಯನ್ನು ಕಾಂಗ್ರೆಸ್ ಆಯ್ಕೆ ಮಾಡುತ್ತದೆ;

7.2.2 ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಖಜಾಂಚಿ ಇರುತ್ತಾರೆ;

7.2.3 ಕಾರ್ಯಕಾರಿ ಸಮಿತಿ ಪ್ರಧಾನ ಕಾರ್ಯದರ್ಶಿಯನ್ನು ನೇಮಿಸಿ ಮೇಲ್ವಿಚಾರಣೆ ಮಾಡುತ್ತದೆ;

7.2.4 ಕಾರ್ಯಕಾರಿ ಸಮಿತಿಯಲ್ಲಿ ಪ್ರಾದೇಶಿಕ ಪ್ರಾತಿನಿಧ್ಯ ಅತ್ಯಗತ್ಯವಾಗಿದ್ದು ಪ್ರತಿ ಪ್ರಾದೇಶಿಕ ಬ್ಲಾಕ್‌ನಿಂದ ಹೆಸರುಗಳು ಸೂಚಿಸಲ್ಪಡಬೇಕು;

7.2.5 ಕಾರ್ಯಕಾರಿ ಸಮಿತಿ ಕನಿಷ್ಟ ಐವತ್ತು ಪ್ರತಿಶತ (50%) ಮಹಿಳಾ ಸದಸ್ಯರನ್ನು ಹೊಂದಿರಬೇಕು;

7.2.6 ಕಾರ್ಯಕಾರಿ ಸಮಿತಿಯ ಸದಸ್ಯರು ವೇಸ್ಟ್ ಪಿಕರ್‌ಗಳಾಗಿದ್ದು ತಮ್ಮ ಕೌನ್ಸಿಲ್ ಕರ್ತವ್ಯಗಳನ್ನು ಪೂರೈಸಲು ಸಿಬ್ಬಂದಿಯ ಸೂಕ್ತ ಬೆಂಬಲ ಇರಬೇಕು;

7.2.7 ಕಾರ್ಯಕಾರಿ ಸಮಿತಿಯು ಪ್ರಸ್ತುತವಿರುವ ವೇಸ್ಟ್ ಪಿಕರ್ಸ್ ಸಂಸ್ಥೆಗಳ ಲಿಸ್ಟ್, ಅವರ ಸದಸ್ಯತ್ವ ಮತ್ತು ಜಾಗತಿಕವಾಗಿ ಅವುಗಳ ಗಾತ್ರವನ್ನು ಪರಿಶೀಲಿಸುತ್ತದೆ. ಒಂದು ಸಮತೋಲಿತ ಮತ್ತು ಅತ್ಯುತ್ತಮ ಭೌಗೋಳಿಕ ಪ್ರಾತಿನಿಧ್ಯವನ್ನು ಖಚಿತಪಡಿಸಿಕೊಳ್ಳಲು ಬಹುಮತದ ನಿರ್ಣಯದ ಮೂಲಕ ಪ್ರಾದೇಶಿಕ ಗಡಿಗಳನ್ನು ನಿರ್ಧರಿಸುತ್ತದೆ;

7.2.8 ಕಾರ್ಯಕಾರಿ ಸಮಿತಿಯ ಅವಧಿಯು ಕಾಂಗ್ರೆಸ್‌ಗಳ ನಡುವಿನ ಐದು (5) ವರ್ಷಗಳವರೆಗೆ ಇರುತ್ತದೆ;

7.2.9 ಕಾರ್ಯಕಾರಿ ಸದಸ್ಯರುಗಳು ನಿವೃತ್ತರಾಗುವಲ್ಲಿ ಅಥವಾ ಮಧ್ಯಾಂತರ ಅವಧಿಗೆ ಅಲಭ್ಯವಾದಲ್ಲಿ ಪರ್ಯಾಯವಾಗಿ ಬೇರೆಯವರನ್ನು ನೇಮಿಸಲಾಗುವುದು. ಪರ್ಯಾಯವೂ ಲಭ್ಯವಿಲ್ಲದಿದ್ದಲ್ಲಿ, ನಿವೃತ್ತರಾಗುವ ಸದಸ್ಯ ಪ್ರತಿನಿಧಿಸುವ ಪ್ರದೇಶದಲ್ಲಿರುವ ಅಂಗಸಂಸ್ಥೆಗಳ ಇಚ್ಛೆಯಂತೆ ಹೊಸ ಸದಸ್ಯನ ಹೆಸರನ್ನು ಸೂಚಿಸಲಾಗುವುದು;

7.2.10 ಕಾರ್ಯಾಕಾರಿ ಸಮಿತಿಯು ಪ್ರತಿ ಮೂರು (3) ತಿಂಗಳಿಗೊಮ್ಮೆ ಆನ್‌ಲೈನ್‌ನಲ್ಲಿ ಸಭೆ ಸೇರುವುದು;

7.2.11 ಸಭೆಗಳ ಕುರಿತ ನೋಟಿಸನ್ನು ಪ್ರಧಾನ ಕಾರ್ಯದರ್ಶಿಯು ಎರಡು ವಾರಗಳ (2) ಮುಂಚಿತವಾಗಿ ಸಮಿತಿಯ ಸದಸ್ಯರಿಗೆ ನೀಡುವನು;

7.2.12 ನಿಗದಿ ಸಂಖ್ಯೆ ಪೂರ್ತಿಯಾಗುವುದು ಐವತ್ತು ಪ್ರತಿಶತ (50%) + ಒಂದು ಮತ (1);

7.2.13 ಕಾರ್ಯಕಾರಿ ಸಮಿತಿಯ ಅಧಿಕಾರ ಮತ್ತು ಕರ್ತವ್ಯಗಳಲ್ಲಿ ಕೆಳಗಿನವುಗಳು ಸೇರಿವೆ:

a. ಅಲೈಯನ್ಸ್‌ನ ಕಾರ್ಯಚಟುವಟಿಕೆಗಳನ್ನು ಉತ್ತೇಜಿಸುವುದು;
b. ಅಲೈಯನ್ಸ್‌ನ ಗುರಿ ಮತ್ತು ಉದ್ದೇಶಗಳನ್ನು ಸಾಧಿಸುವುದು;
c. ಅಲೈಯನ್ಸ್‌ನ ಠರಾವುಗಳು, ಕಾರ್ಯಗಳು, ಯೋಜನೆಗಳು ಮತ್ತು ಪಾಲಿಸಿಗಳನ್ನು ಸುಗಮಗೊಳಿಸಿ ಅನುಷ್ಠಾನಕ್ಕೆ ತರುವುದು;
d. ಸಿಬ್ಬಂದಿಗಳ ಮೇಲುಸ್ತುವಾರಿ;
e. ಉಪಸಮಿತಿಗಳ ಕೆಲಸಗಳನ್ನು ಪರಿವೀಕ್ಷಿಸುವುದು;
f. ಬಜೆಟ್ ಮತ್ತು ವರದಿಗಳನ್ನು ಅನುಮೋದಿಸುವುದು;
g. ಅಂಗಸಂಸ್ಥೆಗಳ ಪ್ರಸ್ತಾವನೆಗಳನ್ನು ಪರಿಗಣಿಸುವುದು;
h. ಕಾಂಗ್ರೆಸ್ ಅನ್ನು ಸಂಘಟಿಸುವುದು;
i. ಸ್ಟಾಫ್‌ಗಳಿಗೆ ಮತ್ತು ಉಪಸಮಿತಿಗಳಿಗೆ ಕೆಲಸಗಳನ್ನು ಹಂಚಿಕೊಡುವುದು;
j. ಅಂಗಸಂಸ್ಥೆ ಸದಸ್ಯರ ಅರ್ಜಿಗಳನ್ನು ಅನುಮೋದಿಸುವುದು ಮತ್ತು ಅಂಗಸಂಸ್ಥೆ ಸದಸ್ಯರ ಸಸ್ಪೆಂಡ್ ವಿಚಾರವನ್ನು ಕಾಂಗ್ರೆಸ್ ಸ್ಥಿರೀಕರಿಸುವುದನ್ನು ಒಪ್ಪುವುದು.

# 7.3 ಪದಾಧಿಕಾರಿಗಳು

### 7.3.1 ಅಧ್ಯಕ್ಷ

ಕಾಂಗ್ರೆಸ್ ಒಂದು ಅವಧಿಗೆ ಪದಾಧಿಕಾರಿಯಾಗಿ ಅಧ್ಯಕ್ಷನನ್ನು ಆಯ್ಕೆ ಮಾಡುತ್ತದೆ ಮತ್ತು ಅದರ ನವೀಕರಣವು ಮತಚಲಾವಣೆ ಮೂಲಕ ಒಂದು ಸಲಕ್ಕೆ ಮಾತ್ರ ಮಾಡಲಾಗುತ್ತದೆ. ಅಧ್ಯಕ್ಷ ಸ್ಥಾನದಲ್ಲಿರುವ ಆಕೆ/ತ ಯಾವುದೇ ಕಾರಣಕ್ಕಾಗಿ ನಿವೃತನಾಗುವಲ್ಲಿ ಕಾರ್ಯಕಾರಿ ಸಮಿತಿಯು ಉಪಾಧ್ಯಕ್ಷನನ್ನು ಅಧ್ಯಕ್ಷ ಸ್ಥಾನಕ್ಕೆ ನೇಮಿಸುವುದು. ಅಧ್ಯಕ್ಷನು:

a. ಕಾಂಗ್ರೆಸ್ ಮತ್ತು ಕಾರ್ಯಕಾರಿ ಸಮಿತಿಯ ಸಭೆಗಳಲ್ಲಿ ಅಧ್ಯಕ್ಷತೆ ವಹಿಸುವನು;
b. ಸಭೆಗಳಲ್ಲಿ ಅಲೈಯನ್ಸ್ ಅನ್ನು, ಅಂಗಸಂಸ್ಥೆಗಳ ಕಾಂಗ್ರೆಸ್‌ಗಳನ್ನು ಹಾಗೂ ಅಲೈಯನ್ಸ್‌ನಲ್ಲಿರದ ಸಂಸ್ಥೆಗಳನ್ನು ಪ್ರತಿನಿಧಿಸುವನು;
c. ಕಾಂಗ್ರೆಸ್ ಹಾಗೂ ಕಾರ್ಯಕಾರಿ ಸಮಿತಿ ಆದೇಶಿಸಿರುವ ಕರ್ತವ್ಯಗಳನ್ನು ನೋಡಿಕೊಳ್ಳುವನು.

### 7.3.2 ಉಪಾಧ್ಯಕ್ಷ

ಕಾಂಗ್ರೆಸ್ ಒಂದು ಅವಧಿಗೆ ಪದಾಧಿಕಾರಿಯಾಗಿ ಉಪಾಧ್ಯಕ್ಷನನ್ನು ಆಯ್ಕೆ ಮಾಡುತ್ತದೆ ಮತ್ತು ಅದರ ನವೀಕರಣವು ಮತಚಲಾವಣೆ ಮೂಲಕ ಒಂದು ಸಲಕ್ಕೆ ಮಾತ್ರ ಮಾಡಲಾಗುತ್ತದೆ. ಅಧ್ಯಕ್ಷನ ಗೈರುಹಾಜರಿಯಲ್ಲಿ ಅಥವಾ ಆಕೆ/ಆತ ನಿಯೋಜಿಸಿರುವಲ್ಲಿ ಉಪಾಧ್ಯಕ್ಷನು ಅಧ್ಯಕ್ಷನ ಕರ್ತವ್ಯಗಳನ್ನು ಮಾಡುವನು.

### 7.3.3 ಖಜಾಂಚಿ

ಕಾಂಗ್ರೆಸ್ ಒಂದು ಅವಧಿಗೆ ಪದಾಧಿಕಾರಿಯಾಗಿ ಖಜಾಂಚಿಯನ್ನು ಆಯ್ಕೆ ಮಾಡುತ್ತದೆ ಮತ್ತು ಅದರ ನವೀಕರಣವು ಮತಚಲಾವಣೆ ಮೂಲಕ ಒಂದು ಸಲಕ್ಕೆ ಮಾತ್ರ ಮಾಡಲಾಗುತ್ತದೆ. ಖಜಾಂಚಿಯು ಕೆಳಗಿನ ಕರ್ತವ್ಯಗಳನ್ನು ಮಾಡುವನು:

a. ಅಲೈಯನ್ಸ್‌ನ ಹಣಕಾಸು ವ್ಯವಹಾರಗಳನ್ನು ನೋಡಿಕೊಳ್ಳುವುದು;
b. ಅಲೈಯನ್ಸ್‌ನ ಅಕೌಂಟ್ ದಾಖಲೆಗಳನ್ನು ಅತ್ಯುತ್ತಮ ರೀತಿಯಲ್ಲಿ ಇಟ್ಟುಕೊಳ್ಳಲು ಬೇಕಾದ ಎಲ್ಲ ಹೆಜ್ಜೆಗಳನ್ನು ತೆಗೆದುಕೊಳ್ಳುವುದು;
c. ಅಕೌಂಟ್ ದಾಖಲೆಗಳ ಆಡಿಟ್ ಆಗುವುದನ್ನು ಖಾತ್ರಿಪಡಿಸುವುದು;
d. ವಾರ್ಷಿಕ ಬ್ಯಾಲನ್ಸ್ ಶೀಟ್‌ಗಳು ಮತ್ತು ಆದಾಯ ಖರ್ಚುಗಳ ಲೆಕ್ಕಪಟ್ಟಿಗಳನ್ನು ತಯಾರಿಸುವುದು;
e. ಆಡಿಟ್ ಮಾಡಲಾದ ವಾರ್ಷಿಕ ಬ್ಯಾಲನ್ಸ್ ಶೀಟ್‌ಗಳು ಮತ್ತು ಆದಾಯ ಖರ್ಚುಗಳ ಲೆಕ್ಕಪಟ್ಟಿಗಳನ್ನು ಸದಸ್ಯರಿಗೆ ಸಲ್ಲಿಸುವುದು ಅಥವಾ ಲಭ್ಯಗೊಳಿಸುವುದು;
f. ಆಫೀಸಿಗೆ ಸಂಬಂಧಿಸಿದ ಮತ್ತಿತರ ದೈನಂದಿನ ಕರ್ತವ್ಯಗಳನ್ನು ನಿಭಾಯಿಸುವುದು.

### 7.3.4 ಪ್ರಧಾನ ಕಾರ್ಯದರ್ಶಿ

ಪ್ರಧಾನ ಕಾರ್ಯದರ್ಶಿಯನ್ನು ಕಾರ್ಯಕಾರಿ ಸಮಿತಿಯು ನೇಮಿಸುವುದು ಮತ್ತು ಕಾಂಗ್ರೆಸ್‌ನ ಮತ ಚಲಾವಣೆ ಮೂಲಕ ಅಲ್ಲ ಸಮಿತಿಯೊಳಗಿನ ಮತದ ಮೂಲಕ, ಇದಕ್ಕೆ ಅರ್ಜಿಗಳನ್ನು ಮತ್ತು ಸಿವಿ ವಿವರಗಳನ್ನು ಆಸಕ್ತ ಅಭ್ಯರ್ಥಿಗಳಿಂದ ಸ್ವೀಕರಿಸಲಾಗುವುದು ಮತ್ತು ವಲಯದ ಬಗ್ಗೆ ಸಾಕಷ್ಟು ಮಾಹಿತಿ ತಿಳಿದವರಾಗಿರಬೇಕು ಮತ್ತು ಔಪಚಾರಿಕ ವೇಸ್ಟ್ ಪಿಕರ್ಸ್ ಗುಂಪುಗಳೊಂದಿಗೆ ಕೆಲಸ ಮಾಡಿಯೋ ಇಲ್ಲವೇ ಪ್ರತಿನಿಧಿಸಿಯೋ ಅನುಭವ ಇರಬೇಕು. ಆಕೆ/ತ ಪೂರ್ಣ ಸಮಯದ ಸ್ಟಾಫ್ ಆಗಿದ್ದು ಸಂಬಳವಿರುತ್ತದೆ ಮತ್ತು ಅಲೈಯನ್ಸ್‌ನ ಎಲ್ಲ ಸಮಿತಿಗಳಲ್ಲಿ ಈಗಾಗಲೇ ಪದಾಧಿಕಾರಿ ಆಗಿರಬೇಕು. ಪ್ರಧಾನ ಕಾರ್ಯದರ್ಶಿಯು ಕಾರ್ಯಕಾರಿ ಸಮಿತಿಗೆ ಹೊಣೆಗಾರನಾಗಿದ್ದು ಕಾಂಗ್ರೆಸ್‌ನ ಯೋಜನೆ ಮತ್ತು ನಿರ್ಧಾರಗಳನ್ನು ಪೂರ್ತಿಗೊಳಿಸಲು ಪದಾಧಿಕಾರಿಗಳೊಂದಿಗೆ ಜೊತೆಗೂಡಿ ಕೆಲಸಮಾಡಬೇಕು. ಆಕೆ/ತ ಕೆಳಗಿನ ಕರ್ತವ್ಯಗಳಿಗೆ ಜವಾಬ್ದಾರನಾಗಿರಬೇಕು:

a. ಸಿಬ್ಬಂದಿಗಳ ಮೇಲುಸ್ತುವಾರಿ ವಹಿಸಿ ಕಾರ್ಯಕಾರಿ ಸಮಿತಿಯ ಠರಾವು ಹಾಗೂ ನಿರ್ದೇಶನಗಳನ್ನು ಚಾಚೂತಪ್ಪದೇ ಪಾಲಿಸಿ ಅದರ ಕೆಲಸಗಳನ್ನು ಪೂರ್ತಿಗೊಳಿಸುವುದು;

b. ಕಾಂಗ್ರೆಸ್ ಮತ್ತು ಕಾರ್ಯಕಾರಿ ಸಮಿತಿಯ ಸಭೆಗಳ ಮಿನಿಟ್ಸ್‌ಗಳನ್ನು ದಾಖಲಿಸಿ ಸರ್ಕ್ಯುಲೇಟ್ ಮಾಡುವುದು;

c. ಅಂಗಸಂಸ್ಥೆಗಳ ಮಧ್ಯೆ ಉತ್ತಮ ಸಂವಾದಗಳನ್ನು ಖಾತ್ರಿಪಡಿಸುವುದು;

d. ಅಂತರರಾಷ್ಟ್ರೀಯ ಮತ್ತು ಪ್ರಾದೇಶಿಕ ಕೋಆರ್ಡಿನೇಟರ್‌ಗಳ ಆಫೀಸ್ ಸ್ಟಾಫ್‌ಗಳು ಸಮರ್ಥರಾಗಿರುವಂತೆ ನೋಡಿಕೊಳ್ಳುವುದು ಹಾಗೂ ಹಣಕಾಸು ಪರಿಸ್ಥಿತಿಗನುಗುಣವಾಗಿ ಇಂಥ ಇನ್ನಿತರ ನೆರವಿನ ಅಗತ್ಯ ಬರಬಹುದು;

e. ಅಲೈಯನ್ಸ್‌ನ ಹಣಕಾಸು ವ್ಯವಹಾರ ನೋಡಿಕೊಳ್ಳುವುದು, ಇದರಲ್ಲಿ ಕಾರ್ಯಕಾರಿ ಸಮಿತಿಗೆ ವಾರ್ಷಿಕ ಹಣಕಾಸು ವರದಿ ಸಲ್ಲಿಸಿ ಬಜೆಟ್ ಪ್ರಸ್ತಾಪನೆ ನೀಡುವುದು ಹಾಗೂ ಹಣಕಾಸು ಪುಸ್ತಕಗಳು ಮತ್ತು ದಾಖಲೆಗಳನ್ನು ಆಡಿಟ್ ಉದ್ದೇಶಕ್ಕಾಗಿ ಸಿದ್ಧವಾಗಿ ಇರಿಸುವುದು ಸೇರಿದೆ;

f. ಸಭೆಗಳಲ್ಲಿ, ಅಂಗಸಂಸ್ಥೆಗಳ ಕಾಂಗ್ರೆಸ್‌ಗಳಲ್ಲಿ ಮತ್ತು ಇತರ ಸಂಸ್ಥೆಗಳಲ್ಲಿ ಅಲೈಯನ್ಸ್‌ನ ಪ್ರತಿನಿಧಿಯಾಗಿ ಸೇವೆಸಲ್ಲಿಸುವುದು.

## 7.4 ಕಾರ್ಯಕಾರಿ ಸಮಿತಿ ಮತ್ತು ಪದಾಧಿಕಾರಿಗಳನ್ನು ಚುನಾಯಿಸುವುದು

ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಖಜಾಂಚಿಯನ್ನು ಕೆಳಗೆ ನೀಡಲಾದ ಪ್ರಕ್ರಿಯೆಗನುಸಾರ ಚುನಾಯಿಸಲಾಗುವುದು:

7.4.1 ಪ್ರಧಾನ ಕಾರ್ಯದರ್ಶಿ ನಾಮಪತ್ರ ಸಲ್ಲಿಸಲು ಕರೆ ನೀಡುವನು;

7.4.2 ನಾಮಪತ್ರಗಳನ್ನು ಚುನಾವಣಾ ಸಮಿತಿಗೆ ಕಳುಹಿಸಲಾಗುವುದು;

7.4.3 ಕಾಂಗ್ರೆಸ್‌ನಲ್ಲಿ ಚುನಾವಣೆಯನ್ನು ರಹಸ್ಯ ಮತದಾನದ ಮೂಲಕ ನಡೆಸಲಾಗುವುದು;

7.4.4 ಚುನಾಯಿತರಾಗುವವರಲ್ಲಿ ಇಬ್ಬರು ಅಥವಾ ಹೆಚ್ಚು ಪದಾಧಿಕಾರಿಗಳು ಮಹಿಳೆಯರು, ನಾನ್-ಬೈನರಿ ಅಥವಾ ತೃತಿಯ ಲಿಂಗಿಗಳು ಆಗಿರಬೇಕು;

7.4.5 ಚುನಾಯಿತರಾದ ಇಬ್ಬರು ಪದಾಧಿಕಾರಿಗಳು ಅದೇ ಪ್ರದೇಶದಿಂದ ಬಂದವರಾಗಿರಬಾರದು;

7.4.6 ಕಾರ್ಯದರ್ಶಿಯನ್ನು ಹೊರತುಪಡಿಸಿ ಎಲ್ಲಾ ಪದಾಧಿಕಾರಿಗಳ ಸ್ಥಾನಗಳನ್ನು ಸರದಿ ಪ್ರಕಾರ ವಿಭಿನ್ನ ಪ್ರದೇಶಗಳಿಗೆ ನೀಡಲಾಗುವುದು;

7.4.7 ನಾಮಪತ್ರ ನೀಡಿರುವ ಅಭ್ಯರ್ಥಿ ಗೈರುಹಾಜರಿ ಆಗಿದ್ದರೂ ಆ ಸ್ಥಾನಕ್ಕಾಗಿರುವ ನಾಮಪತ್ರವನ್ನು ಅವನು/ಅವಳು ಲಿಖಿತ ರೂಪದಲ್ಲಿ ಸ್ವೀಕರಿಸಿರುವಲ್ಲಿ ಚುನಾಯಿಸಬಹುದು;

7.4.8 ಯಾವುದೇ ಅಭ್ಯರ್ಥಿ ಬಹುಮತ ಪಡೆಯದ ಸನ್ನಿವೇಶದಲ್ಲಿ ಗರಿಷ್ಠ ಸಂಖ್ಯೆಯ ಊರ್ಜಿತ ಮತಗಳನ್ನು ಪಡೆದು ಅಗ್ರಸ್ಥಾನದಲ್ಲಿರುವ ಇಬ್ಬರು ಅಭ್ಯರ್ಥಿಗಳ ನಡುವೆ ಎರಡನೇ ಸುತ್ತಿನ ಮತಚಲಾವಣೆ ನಡೆದು ಜಯ ಪಡೆದವರು ಯಾರೆಂದು ಖಚಿತಪಡಿಸಿಕೊಳ್ಳಲಾಗುವುದು;

7.4.9 ಅಲೈಯನ್ಸ್‌ಗಾಗಿ ಅಜೆಂಡ ಮತ್ತು ಕಾರ್ಯಯೋಜನೆಯನ್ನು ಕಾಂಗ್ರೆಸ್ ರಚಿಸುತ್ತದೆ ಎನ್ನುವುದನ್ನು ಪದಾಧಿಕಾರಿಗಳು ಅರ್ಥಮಾಡಿಕೊಳ್ಳತಕ್ಕದ್ದು;

7.4.10 ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಖಜಾಂಚಿಗೆ ನೀಡುವ ಯಾವುದೇ ಸಂಭಾವನೆಯನ್ನು ಕಾಂಗ್ರೆಸ್ ನಿರ್ಧರಿಸುವುದು. ತಾತ್ವಿಕವಾಗಿ ಅವರ ಸಂಬಳಗಳನ್ನು ಅವರ ಆಧಾರ ಸಂಸ್ಥೆಗಳು ನೋಡಿಕೊಳ್ಳಬೇಕು, ಹಾಗಾಗಿ, ಈ ಸ್ಥಾನಗಳನ್ನು ಸಂಭಾವನೆಗಾಗಿ ಬಳಸಬಾರದು. ತಮ್ಮ ಕರ್ತವ್ಯಗಳನ್ನು ಪೂರೈಸಲು ತಗಲಿದ ವೆಚ್ಚಗಳನ್ನು ಭರ್ತಿಮಾಡಲಾಗುವುದು.

# 7.5 ಪದಾಧಿಕಾರಿಗಳ ಸ್ಥಾನದ ವಜಾ

ಅಧ್ಯಕ್ಷ, ಉಪಾಧ್ಯಕ್ಷ, ಖಜಾಂಚಿ ಮತ್ತು ಪ್ರಧಾನ ಕಾರ್ಯದರ್ಶಿ ಈ ಕೆಳಗಿನ ಯಾವುದೇ ಸನ್ನಿವೇಶಗಳಲ್ಲಿ ತಮ್ಮ ಸ್ಥಾನವನ್ನು ತೊರೆಯಬೇಕು:

a. ರಾಜಿನಾಮೆ, ಸಸ್ಪೆಂಡ್ ಆಗುವಲ್ಲಿ ಅಥವಾ ಅಲೈಯನ್ಸ್ ಅಥವಾ ಅದರ ಸದಸ್ಯ ಸಂಸ್ಥೆಗಳ ಸದಸ್ಯತ್ವದಿಂದ ಹೊರಹಾಕಲಾಗುವಲ್ಲಿ, ಅಥವಾ ಕಾರ್ಯಕಾರಿ ಸಮಿತಿಯು ಮೂರರಲ್ಲಿ ಎರಡನೇ ಮತ ಹಾಕಿ ಅಯೋಗ್ಯ ವರ್ತನೆಗಾಗಿ ಸಸ್ಪೆಂಡ್ ಅಥವಾ ಹೊರಹಾಕಿರುವಲ್ಲಿ;

b. ಕಾರ್ಯಕಾರಿ ಸಮತಿಯ ಅನುಮತಿ ಪಡೆಯದೆ ಅವಳು/ಅವನು ಸರದಿಯಾಗಿ ಕಾರ್ಯಕಾರಿ ಸಮಿತಿಯ ಮೂರು (3) ಸಭೆಗಳನ್ನು ಗೈರುಹಾಜರಿಯಾಗಿರುವಲ್ಲಿ;

c. ಸಸ್ಪೆಡ್/ಹೊರಹಾಕುವಿಕೆಯ ಸನ್ನಿವೇಶದಲ್ಲಿ ವಜಾಕ್ಕಾಗಿರುವ ನೋಟಿಸ್ ಕಡಿಮೆಪಕ್ಷ ತೊಂಬತ್ತು (90) ದಿನಗಳಿಗೆ ಮುಂಚಿತವಾಗಿ ಎಲ್ಲ ಸದಸ್ಯ ಸಂಸ್ಥೆಗಳಿಗೆ ಕಳುಹಿಸಲಾಗುವುದು, ಇದು ಕಾರ್ಯಕಾರಿ ಸಮಿತಿಯಲ್ಲಿರುವ ಪ್ರಾದೇಶಿಕ ಪ್ರತಿನಿಧಿಗಳು ತಮ್ಮ ಪ್ರದೇಶದ ಸಂಸ್ಥೆಗಳಿಂದ ಅಭಿಪ್ರಾಯ ಪಡೆದುಕೊಳ್ಳಲು ಅನುವು ಮಾಡಿಕೊಡುವುದು. ಗಂಭೀರ ಅಸಮ್ಮತಿ ಇರುವಲ್ಲಿ ವಿಶೇಷ ಕಾಂಗ್ರೆಸ್‌ಗೆ ಕರೆ ನೀಡುವಂಥ ಹಕ್ಕು (ಕಾಂಗ್ರೆಸ್ ಅನ್ನು ಕರೆಯುವ ನಿಬಂಧನೆಗೆ ಅನುಸಾರ) ಬಹುಪಾಲು ಸದಸ್ಯರು ಹೊಂದಿರುವರು. ಆದರೆ ಈ ರೀತಿ ಆಗುವುದು ತೀರ ವಿರಳ, ಯಾಕೆಂದರೆ, ಸಸ್ಪೆಡ್/ಹೊರಹಾಕುವಿಕೆಗೆ ಮೂರರಲ್ಲಿ ಎರಡು (2/3) ಮತ ಸಾಕು.

# 7.6. ತಾತ್ಕಾಲಿಕ ಪದಾಧಿಕಾರಿಗಳು

7.6.1 ಕಾಂಗ್ರೆಸ್‌ಗಳ ನಡುವೆ ಒಬ್ಬ ಪದಾಧಿಕಾರಿಯ ಸ್ಥಾನ ಖಾಲಿಯಾಗುವಲ್ಲಿ, ಮುಂದಿನ ಕಾಂಗ್ರೆಸ್‌ನ ವರೆಗೆ ಆ ಸ್ಥಾನ ಭರ್ತಿಮಾಡಲು ತಕ್ಕ ಸಾಮರ್ಥ್ಯ ಹೊಂದಿರುವ ಒಬ್ಬನನ್ನು ಕಾರ್ಯಕಾರಿ ಸಮಿತಿಯು ಮೂರರಲ್ಲಿ ಎರಡು (2/3) ಮತ ಹಾಕುವ ಮೂಲಕ ಚುನಾಯಿಸುವುದು;

7.6.2 ಅಂತಹ ಖಾಲಿ ಸ್ಥಾನ ಭರ್ತಿಗೆ ಚುನಾಯಿತನಾದ ಸದಸ್ಯನು ಅವಳ/ಅವನ ಹಿಂದಿನ ಪದಾಧಿಕಾರಿಯ ಮಿಕ್ಕುಳಿದ ಅವಧಿಯವರೆಗೆ ಆ ಸ್ಥಾನ ತುಂಬುವನು;

7.6.3 ಅಂತಹ ಚುನಾವಣೆಗಳಿಗಾಗಿ ನಾಮಕರಣ ಪ್ರಸ್ತಾಪಿಸಬೇಕು, ಅದನ್ನು ಪುಷ್ಟೀಕರಿಸಿರಬೇಕು ಮತ್ತು ಅಧಿಕ ಮತ ಹಾಕಲ್ಪಟ್ಟಿರಬೇಕು.

# 7.7 ಸಿಬ್ಬಂದಿ

ಸಿಬ್ಬಂದಿ ಅನ್ನುವುದು ಅಲೈಯನ್ಸ್‌ನ ಆಡಳಿತ ವರ್ಗವಾಗಿದ್ದು, ಕೆಳಗಿನವುಗಳಂತೆ ಕಾರ್ಯನಿರ್ವಹಿಸುತ್ತದೆ:

a. ಸಿಬ್ಬಂದಿ ವರ್ಗದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿಯದಾಗಿದ್ದು ಆತ ಅಲೈಯನ್ಸ್‌ನ ದೈನಂದಿನ ಕಾರ್ಯಗಳನ್ನು ನಿರ್ವಹಿಸುವನು ಮತ್ತು ಕಾರ್ಯಕಾರಿ ಸಮಿತಿ ಮತ್ತು ಕಾಂಗ್ರೆಸ್‌ನ ಕೆಳಗಿರುವನು;

b. ಈ ವರ್ಗದಲ್ಲಿ ವೇತನ ಹೊಂದಿರುವ ಸ್ಟಾಫ್‌ಗಳಿದ್ದು ಕಾರ್ಯಚಟುವಟಿಕೆಗಳನ್ನು ನಿಭಾಯಿಸುವರು;

c. ಈ ವರ್ಗವು ಕಾರ್ಯಾಕಾರಿ ಸಮಿತಿಯು ಮಾರ್ಗದರ್ಶನದಂತೆ ಕಾರ್ಯನಿರ್ವಹಿಸುವುದು;

d. ಈ ವರ್ಗವು ಎಲ್ಲ ಸಭೆಗಳನ್ನು, ಕಾರ್ಯಕಲಾಪಗಳನ್ನು, ಸದಸ್ಯತ್ವ ನಿರ್ವಹಣೆ, ವರದಿ ಸಿದ್ಧಪಡಿಸುವಿಕೆ ಮತ್ತು ಇತರ ಸಮಿತಿಗಳ ನಡುವಿನ ಸಂಪರ್ಕವನ್ನು ನಿರ್ವಹಿಸುವುದು;

e. ಈ ವರ್ಗವು ಲಾಭೋದ್ದೇಶಕ್ಕಾಗಿ ಕಾರ್ಯನಿರ್ವಹಿಸುವುದಿಲ್ಲ.

# 8. ಹಣಕಾಸು ನಿರ್ವಹಣೆ

8.1 ಅಲೈಯನ್ಸ್‌ನ ಹಣಕಾಸು ನಿರ್ವಹಣೆಯು ಅಲೈಯನ್ಸ್ ನೋಂದಣಿ ಆಗಿರುವ ಮತ್ತು/ಅಥವಾ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿರುವ ದೇಶದ ಹಣಕಾಸು ಮತ್ತು ಕಾನೂನುಗನುಸಾರ ಇರುವುದು;

8.2 ಸಂಸ್ಥೆಯ ನಿಧಿಯು ಸದಸ್ಯತ್ವದ ಶುಲ್ಕಗಳು, ಅನುದಾನಗಳು, ಧನಸಹಾಯ ಸಂಸ್ಥೆಗಳು ನೀಡುವ ಡೊನೆಷನ್ ಹಾಗೂ ವಿವಿಧ ಮೂಲಗಳಿಂದ ಬರುವ ಹಣದಿಂದ ಪಡೆಯಲಾಗುತ್ತದೆ, ಇದು ನಮ್ಮ ತತ್ವಗಳು ಹಾಗೂ ಸಂಬಂಧಿತ ಮೌಲ್ಯಗಳಿಗನುಸಾರ ಇರುತ್ತದೆ;

8.3 ಸಂಸ್ಥೆಯ ಎಲ್ಲಾ ಖಾತೆಗಳ ನಿಧಿಗಳನ್ನು ಅಲೈಯನ್ಸ್‌ನ ವ್ಯವಹಾರಗಳ ಆಡಳಿತಕ್ಕೆ ಸಂಬಂಧಿಸಿದ ವೆಚ್ಚಗಳ ಪಾವತಿಗೆ (ನಿಧಿಗಳ ಇಪ್ಪತ್ತೈದು ಪ್ರತಿಶತ (25%) ವರೆಗೆ), ಆಸ್ತಿಯ ಸ್ವಾಧೀನ ಮತ್ತು/ಅಥವಾ ಈ ಸಂವಿಧಾನದ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳ ಸಾಧನೆಗೆ ಮತ್ತು ಕಾರ್ಯಕಾರಿ ಸಮಿತಿ ಅಥವಾ ಸದಸ್ಯ ಸಂಸ್ಥೆಗಳು ನಿರ್ಧರಿಸಬಹುದಾದ ಅಥವಾ ಆಲೈಯನ್ಸ್‌ನ ಸದಸ್ಯ ಸಂಸ್ಥೆಗಳು ಮತದಾನದ ಮೂಲಕ ನಿರ್ಧರಿಸಬಹುದಾದ ಇತರ ಕಾನೂನುಬದ್ಧ ಉದ್ದೇಶಗಳಿಗಾಗಿ ಅನ್ವಯಿಸಲಾಗುತ್ತದೆ;

8.4 ಅಲೈಯನ್ಸ್ ಲಾಭರಹಿತ ಘಟಕವಾಗಿ ಕಾರ್ಯನಿರ್ವಹಿಸುತ್ತದೆ, ಈ ಸಂವಿಧಾನದ ಕಲಂ 3 ರಲ್ಲಿ ನಿರ್ದಿಷ್ಟಪಡಿಸಿದ ಉದ್ದೇಶಗಳಿಗೆ ತನ್ನ ಸಂಪನ್ಮೂಲಗಳನ್ನು ನಿಗದಿ ಪಡಿಸುತ್ತದೆ ಮತ್ತು ಅದರ ಸದಸ್ಯ ಸಂಸ್ಥೆಗಳಿಗೆ ಯಾವುದೇ ಲಾಭಾಂಶ ಅಥವಾ ಬೋನಸ್‌ಗಳಿಗಾಗಿ ವೆಚ್ಚ ಕಳೆದು ಉಳಿದ ಆದಾಯವನ್ನು ಹಂಚಿಕೆ ಮಾಡುವುದಿಲ್ಲ.

8.5 ಕಾರ್ಯಕಾರಿ ಸಮಿತಿ ಅನುಮತಿಸಿದ ಬ್ಯಾಂಕಿನಲ್ಲಿ ಅಲೈಯನ್ಸ್ ಹೆಸರಲ್ಲಿ ಬ್ಯಾಂಕ್ ಖಾತೆ ತೆರೆಯಲಾಗುವುದು. ಅಲೈಯನ್ಸ್ ಖಾತೆಗಳಿಗೆ ಸಹಿದಾರರಾಗಿ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿಗೆ ಸುಲಭವಾಗಿ ಲಭ್ಯವಿರುವ ಹಾಗೂ ಕಾರ್ಯಕಾರಿ ಸಮಿತಿಯಿಂದ ನೇಮಿಸಲ್ಪಟ್ಟ ಇನ್ನಿತರ ಇಬ್ಬರು (2) ವ್ಯಕ್ತಿಗಳು ಇರುತ್ತಾರೆ. ಮೇಲೆ ತಿಳಿಸಲಾದವರಲ್ಲಿ ಯಾರಾದರೂ ಇಬ್ಬರು (2) ಜೊತೆಯಾಗಿ ಪ್ರತಿಯೊಂದು ವಹಿವಾಟಿಗೆ ಸಹಿಹಾಕುವರು;

8.6 ಮೇಲಿನ ಕಲಂ 8.5 ರಲ್ಲಿ ತಿಳಿಸಲಾದ ಸಹಿದಾರರನ್ನು ಕಾರ್ಯಕಾರಿ ಸಮಿತಿಯು ಪ್ರತಿ ಐದು (5) ವರ್ಷಗಳಿಗೊಮ್ಮೆ ಬದಲಾಯಿಸುವುದು;

8.7 ಆಲೈಯನ್ಸ್‌ನ ಆದಾಯ ವೆಚ್ಚದ ಹಣಕಾಸು ಸ್ಥಿತಿಯ ಅರೆವಾರ್ಷಿಕ ಲೆಕ್ಕಪಟ್ಟಿಯನ್ನು ಪ್ರಧಾನ ಕಾರ್ಯದರ್ಶಿ ಸಿದ್ಧಪಡಿಸುವನು ಹಾಗೂ ಕಾರ್ಯಕಾರಿ ಸಮಿತಿಗೆ ಸಲ್ಲಿಸುವನು, ಕಾರ್ಯಕಾರಿ ಸಮಿತಿಯು ಅವನ್ನು ಕಾಂಗ್ರೆಸ್‌ಗೆ ಸಲ್ಲಿಸುವುದು;

8.8 ಕಾರ್ಯಕಾರಿ ಸಮಿತಿಯಿಂದ ನೇಮಕಗೊಂಡ ಸಂಬಂಧಿತ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಶಾಸನದ ಪ್ರಕಾರ ಲೆಕ್ಕಪರಿಶೋಧಕ ಮತ್ತು ಆಡಿಟರಾಗಿ ನೋಂದಾಯಿಸಲ್ಪಟ್ಟ ವ್ಯಕ್ತಿ/ಕಂಪನಿಯಿಂದ ಅಲೈಯನ್ಸ್‌ನ ಎಲ್ಲಾ ಖಾತೆಗಳನ್ನು ವಾರ್ಷಿಕವಾಗಿ ಆಡಿಟ್ ಮಾಡಲಾಗುತ್ತದೆ;

8.9 ಅಲೈಯನ್ಸ್‌ನ ಆಡಿಟ್ ಮಾಡಲಾದ ಹಣಕಾಸು ಲೆಕ್ಕಪಟ್ಟಿ, ಬ್ಯಾಲೆನ್ಸ್ ಶೀಟ್ ಮತ್ತು ಆಡಿಟ್ ವರದಿಗಳನ್ನು ಕಾರ್ಯಕಾರಿ ಸಮಿತಿಯು ದೃಢೀಕರಿಸಿ ಸದಸ್ಯ ಸಂಸ್ಥೆಗಳಿಗೆ ತೋರಿಸುತ್ತದೆ;

8.10 ಮೇಲಿನ ಕಲಂ 8.8 ಮತ್ತು 8.9 ಗಳಲ್ಲಿ ವಿವರಿಸಲಾಗಿರುವ ಆಡಿಟ್ ವರದಿಯು ಕೆಳಗಿನವುಗಳನ್ನು ತಿಳಿಸುತ್ತದೆ:

a. ಸೆಕ್ಯುರಿಟಿಗಳ ಬಗ್ಗೆ ಆಕೆಗೆ/ಆತನಿಗೆ ತೃಪ್ತಿಯಿದೆ ಮತ್ತು ಅಲೈಯನ್ಸ್‌ನ ಖಾತೆ ಪುಸ್ತಕಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿದ್ದಾರೆ;

b. ಲೆಕ್ಕಪತ್ರ ಪುಸ್ತಕಗಳನ್ನು ಸರಿಯಾದ ರೀತಿಯಲ್ಲಿ ಇಡಲಾಗಿರುವ ವಿಷಯದಲ್ಲಿ ಆತ/ಆಕೆ ತೃಪ್ತಿಪಟ್ಟಿದ್ದಾರೆ;

c. ಆತ/ಆಕೆ ಅಗತ್ಯವಿರುವ ಎಲ್ಲ ಮಾಹಿತಿ ಹಾಗೂ ವಿವರಣೆಗಳನ್ನು ಪಡೆದುಕೊಂಡಿದ್ದಾರೆ;

d. ಆಕೆ/ಆತ ಆಡಿಟ್ ಮಾಡಿದ ಆದಾಯ ವೆಚ್ಚದ ಲೆಕ್ಕಪಟ್ಟಿ ಹಾಗೂ ಬ್ಯಾಲೆನ್ಸ್ ಶೀಟ್ ಅವಳ/ಅವನ ಅಭಿಪ್ರಾಯದಲ್ಲಿ, ಆಕೆ/ಅವನ ಜ್ಞಾನದ ಮತ್ತು ತನಗೆ ನೀಡಲಾದ ವಿವರಣೆಗಳ ಪ್ರಕಾರ ಮತ್ತು ಬ್ಯಾಲೆನ್ಸ್

ಶೀಟ್‌ನ ದಿನಾಂಕದಂದು ಅಲೈಯನ್ಸ್‌ನ ಪುಸ್ತಕಗಳಲ್ಲಿ ತೋರಿಸಿರುವಂತೆ ಅಲೈಯನ್ಸ್‌ನ ವ್ಯವಹಾರಗಳ ಸರಿಯಾದ ಮತ್ತು ಸತ್ಯವಾದ ಸ್ಥಿತಿಯನ್ನು ದಾಖಲಿಸಿದೆ;

e. ಅವಳ/ಅವನ ಅಭಿಪ್ರಾಯದಲ್ಲಿ, ಹಣಕಾಸಿನ ವ್ಯವಹಾರಗಳಿಗೆ ಸಂಬಂಧಿಸಿದಂತೆ ಅಲೈಯನ್ಸ್‌ನ ಸಂವಿಧಾನದ ನಿಬಂಧನೆಗಳನ್ನು ಅನುಸರಿಸಲಾಗಿದೆ;

8.11 ರಾಜಿನಾಮೆ ನೀಡುವ ಅಥವಾ ಅಲೈಯನ್ಸ್‌ನಿಂದ ಹೊರಹಾಕಲ್ಪಟ್ಟಿರುವ ಸದಸ್ಯ ಸಂಸ್ಥೆಯು ಅಲೈಯನ್ಸ್‌ನ ನಿಧಿಯ ಮೇಲೆ ಯಾವುದೇ ಹಕ್ಕನ್ನು ಹೊಂದಿರುವುದಿಲ್ಲ;

8.12 ಅಲೈಯನ್ಸ್‌ನ ಸದಸ್ಯರು ಅಥವಾ ಪದಾಧಿಕಾರಿಗಳು ಅಲೈಯನ್ಸ್‌ಗೆ ಸೇರಿದ ನಿಧಿ ಮತ್ತು ಆಸ್ತಿಯ ಹಕ್ಕನ್ನು ಹೊಂದಿರುವುದಿಲ್ಲ;

8.13 ಸಂಸ್ಥೆಯು ತನ್ನ ಯಾವುದೇ ಹಣ ಅಥವಾ ಆಸ್ತಿಯನ್ನು ತನ್ನ ಸದಸ್ಯ ಅಥವಾ ಪದಾಧಿಕಾರಿಗೆ ಕೊಡುವುದಿಲ್ಲ, ಸದಸ್ಯ ಅಥವಾ ಪದಾಧಿಕಾರಿ ಸಂಸ್ಥೆಗಾಗಿ ಮಾಡಿದ ಕೆಲಸಕ್ಕೆ ಪಾವತಿ ಕೊಡಬಹುದು. ಅಂತಹ ಸಂದರ್ಭಗಳಲ್ಲಿ, ಪಾವತಿಯು ಮಾಡಿದ ಕೆಲಸಕ್ಕೆ ಸಮಂಜಸವಾದ ಮೊತ್ತವಾಗಿರಬೇಕು;

8.14 ಅಲೈಯನ್ಸ್‌ನ ಹಣಕಾಸಿನ ವರ್ಷವನ್ನು ಸಿಬ್ಬಂದಿಯಿರುವ ಸ್ಥಳಕ್ಕನುಗುಣವಾಗಿ ಮತ್ತು ಆ ದೇಶದ ಪದ್ಧತಿ ಪ್ರಕಾರ ನಿರ್ಧರಿಸಲಾಗುತ್ತದೆ.

# **9.** ಅಂಗಸಂಸ್ಥೆಗಳ ಕರ್ತವ್ಯಗಳು

## **9.1** ಅಲೈಯನ್ಸ್ ಮತ್ತು ಅಂಗಸಂಸ್ಥೆಗಳ ನಡುವಿನ ಸಂಬಂಧ:

ಅಲೈಯನ್ಸ್ ತನ್ನ ಅಂಗಸಂಸ್ಥೆಗಳ ಸ್ವಾಯತ್ತತೆಯನ್ನು ಗೌರವಿಸಿ ಮಾನ್ಯಮಾಡುತ್ತದೆ. ಅಂತೆಯೇ, ಕಾಂಗ್ರೆಸ್ ಅಥವಾ ಕಾರ್ಯಕಾರಿ ಸಮಿತಿ ಸಮ್ಮತ್ತಿಸಿರುವಂತೆ ಅಲೈಯನ್ಸ್‌ನ ತಮ್ಮ ಸದಸ್ಯತ್ವಕ್ಕೆ ಸಂಬಂಧಿಸಿದ ನಿರ್ಧಾರಗಳು ಮತ್ತು ನೀತಿಗಳನ್ನು ಅಂಗಸಂಸ್ಥೆಗಳು ಪಾಲಿಸಿ ಕಾರ್ಯಗತಗೊಳಿಸುವುದನ್ನು ನಿರೀಕ್ಷಿಸಲಾಗುತ್ತದೆ;

## **9.2** ಅಂಗಸಂಸ್ಥೆಗಳ ಕರ್ತವ್ಯಗಳು

ಅಲೈಯನ್ಸ್‌ಗೆ ಸಂಯೋಜನೆಗೊಂಡಿರುವ ಒಂದು ಸಂಸ್ಥೆಯು ಕೆಳಗಿನ ಕರ್ತವ್ಯಗಳನ್ನು ನಿರ್ವಹಿಸುತ್ತದೆ:

9.2.1 ತನ್ನ ಚುನಾವಣೆಗಳು, ತನ್ನ ಪದಾಧಿಕಾರಿ ಮತ್ತು ಸದಸ್ಯತ್ವದಲ್ಲಿ ಯಾವುದೇ ಬದಲಾವಣೆಗಳು ಹಾಗೂ ಹೊಸ ಸಂಪರ್ಕ ಬಗ್ಗೆಗಿನ ಮಾಹಿತಿಯನ್ನು ಪ್ರತಿವರ್ಷ ಡಿಸೆಂಬರ್ 31 ರಂದು ಸಿಬ್ಬಂದಿಗೆ ತಿಳಿಸುವುದು;

9.2.2 ಆವಶ್ಯವಿರುವ ಇತರ ಮಾಹಿತಿಯನ್ನು ತನ್ನ ಸಾಮರ್ಥ್ಯಕ್ಕೆ ತಕ್ಕಂತೆ ಒದಗಿಸುವುದು;

9.2.3 ತನ್ನ ಸುದ್ದಿಪತ್ರದಲ್ಲಿ, ವೆಬ್‌ಸೈಟ್‌ನಲ್ಲಿ ಮತ್ತು ಇತರ ಮಾಧ್ಯಮಗಳಲ್ಲಿ ಅಲೈಯನ್ಸ್‌ನ ಚಟುವಟಿಕೆಗಳ ಬಗ್ಗೆ ಮಾಹಿತಿ ಪ್ರಕಟಿಸಿ ಆ ಮಾಹಿತಿಯ ಪ್ರತಿಗಳು ಅಥವಾ ಲಿಂಕ್‌ಗಳನ್ನು ಸಿಬ್ಬಂದಿಗೆ ಕಳುಹಿಸುವುದು;

9.2.4 ವಾರ್ಷಿಕ ವರದಿಯ ಪ್ರತಿಗಳನ್ನು ಸಿಬ್ಬಂದಿಗೆ ಕಳುಹಿಸುವುದು;

9.2.5 ಮೇಲಿನ ಕಲಂ 6 ರಲ್ಲಿನ ನಿಬಂಧನೆ ಪ್ರಕಾರ ಅಂಗಸಂಸ್ಥೆ ಶುಲ್ಕವನ್ನು ನಿಯಮಿತವಾಗಿ ಪಾವತಿಸುವುದು;

9.2.6 ಕಾಂಗ್ರೆಸ್ ಮತ್ತು ಅಲೈಯನ್ಸ್‌ನ ಇತರ ಕಾರ್ಯಚಟುವಟಿಕೆಗಳಲ್ಲಿ ಭಾಗವಹಿಸುವುದು;

9.2.7 ಜಂಟಿ ಜಾಗತಿಕ ಚಟುವಟಿಕೆಗಳಿಗೆ ಕೌಶಲ್ಯಗಳು, ಸಾಮಗ್ರಿಗಳು ಮತ್ತು ಹಣಕಾಸುಗಳಂತಹ ಸಂಪನ್ಮೂಲಗಳನ್ನು ಒದಗಿಸುವ/ಹಂಚಿಕೊಳ್ಳುವ ಮೂಲಕ ಉತ್ಸಾಹ ಮತ್ತು ಐಕ್ಯದಿಂದ ಅಭಿವೃದ್ಧಿಗೆ ಬೆಂಬಲ ನೀಡುವುದು.

# 10. ಸಂವಿಧಾನದ ವ್ಯಾಖ್ಯಾನ

10.1 ಈ ಸಂವಿಧಾನದ ನಿಬಂಧನೆಗಳ ವ್ಯಾಖ್ಯಾನ ಅಥವಾ ಅದಕ್ಕೆ ಸಂಬಂಧಿಸಿದಂತೆ ಉದ್ಭವಿಸುವ ಯಾವುದೇ ವಿಷಯದ ಜವಾಬ್ದಾರಿ ಕಾಂಗ್ರೆಸ್‌ಗೆ ಸೇರಿದ್ದಾಗಿದೆ. ಕಾಂಗ್ರೆಸ್‌ಗಳ ನಡುವೆ, ತಾತ್ಕಾಲಿಕ ನಿಯಮಗಳನ್ನು ಸ್ಥಾಪಿಸಲು ಮತ್ತು ವ್ಯಾಖ್ಯಾನಕ್ಕೆ ಸಂಬಂಧಿಸಿದ ಮಧ್ಯಂತರ ತೀರ್ಪು ಮಾಡಲು ಕಾರ್ಯಕಾರಿ ಸಮಿತಿಗೆ ಅಧಿಕಾರ ನೀಡಲಾಗುವುದು ಮತ್ತು ಇದು ಕಾಂಗ್ರೆಸ್‌ನ ಅಂತಿಮ ನಿರ್ಧಾರಕ್ಕೆ ಒಳಪಟ್ಟಿರುತ್ತದೆ;

10.2 ಈ ಸಂವಿಧಾನದ ಭಾಷಾಂತರಗಳಲ್ಲಿ ಅರ್ಥಬದಲಾವಣೆ ಇರುವಲ್ಲಿ ಇಂಗ್ಲೀಷ್ ಆವೃತ್ತಿ ಮೇಲುಗೈ ಸಾಧಿಸುತ್ತದೆ.

# 11. ತಿದ್ದುಪಡಿಗಳು

ಕಾಂಗ್ರೆಸ್ ಈ ಸಂವಿಧಾನದ ನಿಬಂಧನೆಗಳನ್ನು ಎಪ್ಪತ್ತೈದು ಪ್ರತಿಶತ (75%) ಬಹುಮತದಿಂದ ತೆಗೆದುಹಾಕಬಹುದು, ತಿದ್ದುಪಡಿ ಮಾಡಬಹುದು ಅಥವಾ ಕೂಡಿಸಬಹುದು, ಆದರೆ ಅದಕ್ಕೆ ಮುಂಚಿತವಾಗಿ ಯಾವುದೇ ಪ್ರಸ್ತಾವಿತ ಬದಲಾವಣೆಯ ಬಗ್ಗೆ ಕನಿಷ್ಠ ಅರವತ್ತು (60) ದಿನಗಳ ಸೂಚನೆಯನ್ನು ಎಲ್ಲಾ ಸದಸ್ಯರಿಗೆ ನೀಡಬೇಕು.

# 12. ಅಧಿಕಾರಿಗಳು/ನಾಯಕರ ನಷ್ಟ ಪರಿಹಾರ

ಅಲೈಯನ್ಸ್‌ನ ಪದಾಧಿಕಾರಿಗಳು, ಕಾರ್ಯಕಾರಿ ಸಮತಿಯ ಸದಸ್ಯರು, ಪ್ರತಿನಿಧಿಗಳು ಮತ್ತು ನೌಕರರು, ಅಲೈಯನ್ಸ್‌ನ ಹಿತಾಸಕ್ತಿಗಳನ್ನು ಹೆಚ್ಚಿಸುವ ರೀತಿಯಲ್ಲಿ ಸದ್ಭಾವನೆಯಿಂದ ವರ್ತಿಸಿದ್ದರೆ, ಅಲೈಯನ್ಸ್ ಅಥವಾ ಅದರ ಸದಸ್ಯರ ಪರವಾಗಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಲ್ಲಿ ಮಾಡಿದ ಯಾವುದೇ ಲೋಪ, ನಿರ್ಲಕ್ಷ್ಯ ಅಥವಾ ಇತರ ಕೃತ್ಯದಿಂದಾಗಿ ಉಂಟಾಗುವ ಎಲ್ಲಾ ಕಾರ್ಯವಿಧಾನಗಳ ವೆಚ್ಚ ಮತ್ತು ಖರ್ಚುಗಳ ವಿರುದ್ಧ ಆಲೈಯನ್ಸ್ ಪರಿಹಾರ ನೀಡುತ್ತದೆ. ಮತ್ತು ಅವರು ಅಲೈಯನ್ಸ್‌ನ ಯಾವುದೇ ಬಾಧ್ಯತೆಗಳಿಗೆ ಅಥವಾ ಹೊಣೆಗಾರಿಕೆಗಳಿಗೆ ವೈಯಕ್ತಿಕವಾಗಿ ಜವಾಬ್ದಾರರಾಗಿರುವುದಿಲ್ಲ.

# 13. ವಿಸರ್ಜನೆ

13.1 ಅಂಚೆ ಮತ್ತು ಎಲೆಕ್ಟ್ರಾನಿಕ್ ಚುನಾವಣೆ ನಡೆಸಿ ಮತ ಚಲಾಯಿಸಲು ಅರ್ಹರಾದ ಪ್ರತಿನಿಧಿಗಳಲ್ಲಿ ಕನಿಷ್ಠ ಎಂಭತ್ತು ಪ್ರತಿಶತ (80%) ಪ್ರತಿನಿಧಿಗಳು ಚುನಾವಣೆಯಲ್ಲಿ ಭಾಗವಹಿಸಿದ್ದು, ಮತ ಚಲಾಯಿಸಲು ಅರ್ಹರಾದ ಪ್ರತಿನಿಧಿಗಳಲ್ಲಿ ಎಪ್ಪತ್ತೈದು ಪ್ರತಿಶತರು (75%) ಅವರು ಅಂಗೀಕರಿಸಿದ ಠರಾವಿನ ಮೂಲಕ ಯಾವುದೇ ಸಮಯದಲ್ಲಿ ಅಲೈಯನ್ಸ್ ಅನ್ನು ವಿಸರ್ಜಿಸಬಹುದು;

13.2 ಅಲೈಯನ್ಸ್‌ನ ವಿಸರ್ಜನೆಯನ್ನು ಕಾಂಗ್ರೆಸ್ ನಿರ್ಧರಿಸುವಲ್ಲಿ, ಯಾವುದೇ ಹಣಕಾಸಿನ ಬಾಧ್ಯತೆಗಳನ್ನು ಪೂರೈಸತಕ್ಕದ್ದು. ಅಲೈಯನ್ಸ್‌ನ ನಿಧಿ ಮತ್ತು ಸ್ವತ್ತುಗಳ ವಿಲೇವಾರಿಯ ವಿಧಾನವನ್ನು ಕಾಂಗ್ರೆಸ್ ನಿರ್ಧರಿಸುತ್ತದೆ;

13.3 ವಿಸರ್ಜನೆ ಮಾಡಲು ಠರಾವು ಮಾಡಿರುವ ಕಾಂಗ್ರೆಸ್ ಅಲೈಯನ್ಸ್‌ನ ನಿಧಿ ಮತ್ತು ಸ್ವತ್ತುಗಳ ವಿಲೇವಾರಿಯ ವಿಧಾನವನ್ನು ನಿರ್ಧರಿಸದಿದ್ದರೆ, ಈ ಕೆಳಗಿನ ನಿಬಂಧನೆಗಳು ಅನ್ವಯವಾಗುತ್ತವೆ:

a. ಕೊನೆಯದಾಗಿ ನೇಮಕಗೊಂಡ ಕಾರ್ಯಕಾರಿ ಸಮಿತಿಯ ಲಭ್ಯವಿರುವ ಸದಸ್ಯರು ವಿಸರ್ಜನೆಯನ್ನು ಕೈಗೊಳ್ಳಲು ಲಿಕ್ವಿಡೇಟರ್ ಅನ್ನು ನೇಮಿಸಬೇಕು. ಲಿಕ್ವಿಡೇಟರ್ ಅಲೈಯನ್ಸ್‌ನ ಸದಸ್ಯನಾಗಿರುವುದಿಲ್ಲ

ಮತ್ತು ಅವಳು/ಅವನು ಹಾಗೂ ಮೇಲೆ ತಿಳಿಸಿದ ಲಭ್ಯವಿರುವ ಸದಸ್ಯರು ಪರಸ್ಪರ ಸಮ್ಮತಿಸಿರುವ ಶುಲ್ಕಗಳನ್ನು ಪಾವತಿಸತಕ್ಕದ್ದು;

b. ನೇಮಕಗೊಂಡ ಲಿಕ್ವಿಡೇಟರ್ ಅಲೈಯನ್ಸ್‌ನ ಕೊನೆಯ ಪದಾಧಿಕಾರಿಗಳು ಮತ್ತು ಸಿಬ್ಬಂದಿಗೆ ಲೆಕ್ಕಪುಸ್ತಕಗಳನ್ನು ತಲುಪಿಸಲು ಕರೆ ನೀಡಬೇಕು, ಇದರಲ್ಲಿ ಅಲೈಯನ್ಸ್‌ನ ಆಸ್ತಿಗಳು ಮತ್ತು ಹೊಣೆಗಾರಿಕೆಗಳನ್ನು ತೋರಿಸಬೇಕು ಮತ್ತು ಅಲೈಯನ್ಸ್ ಕಾರ್ಯನಿರ್ವಹಿಸಲು ಸಾಧ್ಯವಾಗದ ದಿನಾಂಕಕ್ಕಿಂತ ಹನ್ನೆರಡು (12) ತಿಂಗಳುಗಳ ಹಿಂದಿನ ಸದಸ್ಯರ ರಿಜಿಸ್ಟರ್ ಅನ್ನು ತೋರಿಸಬೇಕು. ಈ ದಿನಾಂಕವನ್ನು ಇನ್ನು ಮುಂದೆ ವಿಸರ್ಜನೆಯ ದಿನಾಂಕ ಎಂದು ಉಲ್ಲೇಖಿಸಲಾಗುತ್ತದೆ, ವಿಸರ್ಜನೆಯ ದಿನಾಂಕದಂದು ಪ್ರತಿಯೊಬ್ಬ ಸದಸ್ಯರು ಪಾವತಿಸುವ ಶುಲ್ಕವನ್ನು ಸಹ ತೋರಿಸಬೇಕು. ಲಿಕ್ವಿಡೇಟರ್ ಅಲೈಯನ್ಸ್‌ನ ಸದರಿ ಪದಾಧಿಕಾರಿಗಳು ಮತ್ತು ಉದ್ಯೋಗಿಗಳಿಗೆ ಕರೆ ನೀಡಿ, ಅಲೈಯನ್ಸ್‌ನ ಖರ್ಚು ಮಾಡದ ಎಲ್ಲಾ ನಿಧಿಗಳನ್ನು ಹಸ್ತಾಂತರಿಸುವಂತೆ, ಸ್ವತ್ತುಗಳನ್ನು ವಿಸರ್ಜಿಸಲು ಅಗತ್ಯವಾದ ಸ್ವತ್ತುದಾಖಲೆಗಳನ್ನು ಅವಳಿಗೆ/ಅವನಿಗೆ ನೀಡುವಂತೆ ಸೂಚಿಸಬೇಕು;

c. ಲಿಕ್ವಿಡೇಟರ್ ಅಲೈಯನ್ಸ್‌ನ ಸಾಲಗಳನ್ನು ಇನ್ನೂ ಖರ್ಚಾಗದೇ ಉಳಿದಿರುವ ಅದರ ನಿಧಿಗಳಿಂದ ಮತ್ತು ಸ್ವತ್ತುಗಳ ಮಾರಾಟದಿಂದ ದೊರೆಯುವ ಯಾವುದೇ ಇತರ ಹಣದಿಂದ ತೀರಿಸಲು ಬೇಕಾದ ಅಗತ್ಯ ಕ್ರಮ ಕೈಗೊಳ್ಳಬೇಕು;

d. ಹಿಂದಿನ ಕಲಮಿಗೆ ಅನುಗುಣವಾಗಿ ಎಲ್ಲಾ ಸಾಲಗಳನ್ನು ಪಾವತಿಸಿದ ನಂತರ, ಉಳಿದ ನಿಧಿ, ಸ್ವತ್ತುಗಳನ್ನು ಅಥವಾ ಭಾಗಂಶವನ್ನು ತದ್ರೀತಿಯ ಗುರಿ ಉದ್ದೇಶಗಳನ್ನು ಹೊಂದಿರುವ ಯಾವುದೇ ಸೂಚಿಸಲಾದ ಸಂಸ್ಥೆಗೆ ವರ್ಗಾಯಿಸುವ ಮೂಲಕ ವಿಲೇವಾರಿ ಮಾಡಬೇಕು, ಅಥವಾ ವಿಸರ್ಜಿಸಲಾದ ರೀತಿಯ ಮತ್ತೊಂದು ಸಂಸ್ಥೆಯನ್ನು ಸ್ಥಾಪಿಸುವವರೆಗೆ ನ್ಯಾಸದಲ್ಲಿಟ್ಟು ಆ ರೀತಿಯ ಕೆಲಸ ಮಾಡುವ ಎಲ್ಲಾ ಸಂಸ್ಥೆಗಳಿಗೆ ಮುಕ್ತವಾಗಿ ತೆರೆದಿಡಲ್ಪಟ್ಟಿರಬೇಕು.

# 14. ಅನುಬಂಧಿತ ನಿಬಂಧನೆಗಳು

ರೂಪಿಸಿ ಅಳವಡಿಸಿಕೊಳ್ಳಬೇಕಾದ ನಿಯಮಗಳು ಮತ್ತು ಕಾರ್ಯವಿಧಾನಗಳಲ್ಲಿ ಈ ಸಮಯದಲ್ಲಿ ಗುರುತಿಸಲ್ಪಟ್ಟವುಗಳು ಕೆಳಗಿನವುಗಳಾಗಿದ್ದು, ಇವುಗಳಿಗೆ ಸೀಮಿತವಾಗಿಲ್ಲ:

- ಸದಸ್ಯತ್ವ ಅರ್ಜಿ ನಮೂನೆ.
- ಸಭೆಗಳನ್ನು ನಡೆಸುವ ವಿಧಿವಿಧಾನಗಳು.
- ಕಾಂಗ್ರೆಸ್ ನಡೆಸಲು ವಿಧಿವಿಧಾನಗಳು.
- ಅಂತರರಾಷ್ಟ್ರೀಯ ಕಾಂಗ್ರೆಸ್‌ಗಳಲ್ಲಿ ಕಾರ್ಯಕಾರಿ ಸಮಿತಿಯ ಸದಸ್ಯರ ಚುನಾವಣೆಗೆ ನಾಮಪತ್ರ ಸಲ್ಲಿಕೆಯ ಕಾರ್ಯವಿಧಾನ.
- ಅಂತರರಾಷ್ಟ್ರೀಯ ಕಾಂಗ್ರೆಸ್‌ಗಳಲ್ಲಿ ಚುನಾವಣ ಪ್ರಕ್ರಿಯೆ.
- ಉಪಸಮಿತಿಗಳ ಉದ್ದೇಶ, ವ್ಯಾಪ್ತಿ ಇತ್ಯಾದಿ.